Estd: ಸ್ಥಾಪನೆ: 1918

REGD·NO·M·4648

KANTEERAVA WEEKLY

ಕಂಠೀರವ

MANGALORE] 19—7—1960
Vol. ಸಂಪುಟ 42] [No. ಸಂಚಿಕೆ 16

For
Artistic Printing & Book Binding
Please pay a visit to:
MANGALORE PRESS
Car Street, MANGALORE-1.

ಚಂದಾ ದರ: 'ಕಂಠೀರವ'—
ಸ್ಥಳೀಯರಿಗೆ ರೂ. 4.
ಪರ ಸ್ಥಳೀಯರಿಗೆ ರೂ. 5.
ಬಿಡಿ ಸಂಚಿಕೆ: 9 ನಯೆ ಪೈಸೆ(ರೂ. 0—1—6)
ಕಾರ್ಯಾಲಯ: ರಥಬೀದಿ, ಮಂಗಳೂರು

ಕಸಬರಿಗೆ ಸಂಸಾರ

ಎಲ್ಲ ಸಂಸಾರಗಳಿಗೂ ಕಸಬರಿಗೆ ಅವ ಅದು ಅಲ್ಲಿ ಇದ್ದೇ ತೀರಬೇಕು. ದು ಗೃಹಕೃತ್ಯದ ಅತ್ಯಂತ ಖ್ಯ ಸಾಧನ--ದೇವಸ್ಥಾನಗಳಲ್ಲಿ ರ ಎಷ್ಟು ಮುಖ್ಯವೋ ಪ್ರತಿ ನೆಗೂ ಕಸಬರಿಗೆ ಅದಕ್ಕಿಂತ ಮುಖ್ಯ.

ಕಸಬರಿಗೆ ಅನ್ನುವ ಪದಾರ್ಥ ಒಂದಿ ಲ್ಲದೆ ಹೋಗಿದ್ದರೆ ಮನೆಯೊಳಗಿನ ಕಸ ಕುಪ್ಪೆ ಜಾಡನ ಬಲೆ ಇವೆಲ್ಲದರ ಗತಿ ಏನಾಗಬೇಕಿತ್ತು? ಅದು ಅಗ್ಗದ ವಸ್ತು; ಅಂತಲೇ ಅದಕ್ಕೆ ನಿಜವಾದ ಬೆಲೆ ಕಟ್ಟಲ್ಲ; ಕೊಟ್ಟಲ್ಲ.

ಮತ್ತೆ ನೋಡಿದರೆ ನಮ್ಮ ಜೀವನದಲ್ಲಿ ಇಷ್ಟೊಂದು ಸಾರಭೂತವಾದ ಆ ಪದಾರ್ಥಕ್ಕೆ ಕೊಟ್ಟ ಸ್ಥಾನವಾನವಾದರೂ ಯಾವುದು? ಬಹು ಕೇಳಾದದ್ದು—ಎಲ್ಲಿಯೋ ಒಂದು ಮುಚ್ಚುಮರೆಯ ಬಾಗಿಲ ಸಂದಿ ಮೂಲೆ. 'ಅಷ್ಟೇ ಅಲ್ಲ; ಅವ ದೃಷ್ಟಿಯ 'ಮರ್ಯಾದೆ'ಗೇ ಕೈ ಮೊದಲು ಹೋಗುವುದು ಗಲೇ.

ೀಕರಣದ ಜೀವಾಳವಾದ ಸಮಾಜ ಸಾಮಾನ್ಯವಾಗಿ ನ ಸ್ಥಾನ ಅಷ್ಟೊಂದು ಹೀನ ಭಾಗದ ಪ್ರಧಾನ ನೆಹರೂ ಬರಿಗೆ ಸಂಸಾರಕ್ಕೊಂದು ಸ್ಥಾನ ಕೊಟ್ಟ ಮೇಲೆ ಅದರ ನ ಖಚಿತವಾಗದೇ? ಅದರ ಸ್ಥಾನ ನ್ನತಿಗೇರದೇ?

ಂ ಂಂ ಂ

ಶ್ರೀ ನೆಹರು ಕಸಬರಿಗೆಗೆ ಕೊಟ್ಟ ಸ್ಥಾನ

ಆಡಳಿತ ಕಾರ್ಯವನ್ನೇ ಅಲ್ಲದೆ ಇಡಿಯ ದೇಶವನ್ನೇ ಸ್ವಚ್ಛಗೊಳಿಸುವ ವಿಶಾಲ ವ್ಯಾಪ್ತಿಯ ಕಾರ್ಯಭಾರ ಕಸಬರಿಗೆಗೇ ಇರಲೆಂದಿದ್ದಾರೆ ಶ್ರೀ ನೆಹರು. ಅದರ ಮಹತ್ವದ ಸ್ಥಾನವೆಂದರೆ ಅದು. ಆಡಳಿತದೊಡನೆ ದೇಶದಲ್ಲಿಯೂ ಕೊಳೆ ಅಷ್ಟು ಮಟ್ಟಿಗೂ ತುಂಬಿಕೊಂಡಿದೆ ಎಂದು ಅದರ ಅರ್ಥ.

ಅದಿಷ್ಟು ಇದಿಷ್ಟು

ಆ ಅಭಿಪ್ರಾಯವನ್ನು ಅವರು ತಮ್ಮಲ್ಲೇ ಬಚ್ಚಿಟ್ಟುಕೊಂಡಿಲ್ಲ. ಅವರು ಈ ವಿಷಯದಲ್ಲಿ ಎಲ್ಲ ರಾಜ್ಯದ ಮುಖ್ಯ ಮಂತ್ರಿಗಳಿಗೂ ಖಿನ್ನ ಶಬ್ದಗಳ ಒಂದು ಪತ್ರ ಬರೆಯುವಲ್ಲಿ ವಿಶೇಷ ಶ್ರಮ ವಹಿಸಿದ್ದಾರೆ. ಕಾರ್ಯಬಾಹುಳ್ಯವಿದ್ದರೂ ಅದಕ್ಕಾಗಿ ಅಷ್ಟು ಸಮಯವನ್ನೂ ವ್ಯಯಿಸಿದ್ದಾರೆ.

ಶ್ರೀ ನೆಹರು ಆ ಪತ್ರದಲ್ಲಿ ಈ ಶುದ್ಧೀಕರಣದ ಕಾರ್ಯದಲ್ಲಿ 'ಉದ್ದ ಹಿಡಿಯ ಕಸಬರಿಗೆ'ಯನ್ನೇ ಉಪಯೋಗಿಸುವಂತೆ ಒತ್ತಾಯ ಪಡಿಸಿದ್ದಾರೆ.

ಂ ಂಂ ಂ

ಉದ್ದ ಗಿಡ್ಡ ಕಸಬರಿಗೆ ಹೋಲಿಕೆ

ಉದ್ದ ಹಿಡಿಯ ಕಸಬರಿಗೆ ಉಪಯೋಗ ಬೀದಿ ರಸ್ತೆ ಚರಂಡಿ ರಸ್ತೆಗಳ ಕಸ ಬಳೆಯಲಿಕ್ಕೆ. ಅನ್ನುವಾಗ ಅಡಳಿತ ಮತ್ತು ದೇಶದಲ್ಲಿ ತುಂಬಿರುವ ಕೊಳೆಯ ಗುಡ್ಡೆಯಾವ ಪ್ರಮಾಣ ಮತ್ತು ಪರಿಮಾಣದ್ದೆಂದು ಸುಲಭವಾಗಿ ತಿಳಿಯಬಹುದು.

ಹಿಂದೆ ಇದೇ ವಿಷಯದಲ್ಲಿ ಹಲವು ಮಂದಿ ಧಾರಾಳ ಧೂಳೆಬ್ಬಿಸಿದ್ದರು. ಆದರೆ ಕಸಬರಿಗೆ ಶಾಸ್ತ್ರದಿಂದ ಆ ಧೂಳೊರಸುವ ಆವಶ್ಯಕತೆಯನ್ನು ಅಗ್ರಪೀಠ ಕಂಡುಕೊಂಡದ್ದು ಇದೇ ಪ್ರಥಮ ಬಾರಿ.

ಈ ಸಂದರ್ಭದಲ್ಲಿ "ಗಿಡ್ಡ ಕಸಬರಿಗೆ ಉಪಯೋಗವೆಂಬುದು ಪ್ರಾಚೀನ ಪದ್ಧತಿಯಾಯಿತು. ಅದು ಗುಡಿಸುವವರ ಆರೋಗ್ಯಕ್ಕೂ ಹಾನಿಕರವಷ್ಟೇ ಅಲ್ಲ; ಕೊಂಚ ಕ್ಷುದ್ರ ಮನೋವೃತ್ತಿಯನ್ನೂ ಅದು ಪ್ರೋತ್ಸಾಹಿಸುತ್ತದೆ" ಎಂದ ಶ್ರೀ ನೆಹರು ನುಡಿ ನ್ಯಾಯವಾಡದ್ದೇ.

ಈ ಗಿಡ್ಡ ಕಸಬರಿಗೆಯ ಎರಡು ರೀತಿಯ ಕೆಡುಕುಗಳು ಒಂದಕ್ಕೊಂದು ಹೆಣೆದುಕೊಂಡಿವೆ. ಸದಾ ಬಗ್ಗುವುದರಿಂದ ಗುಡಿಸುವವನ ಬೆನ್ನು ನೋಯುತ್ತಿದೆ. ಆತ ನೆಟ್ಟಗೆ ನಿಲ್ಲುವ ಮನುಷ್ಯನಾಗುವುದಕ್ಕೂ ಅಡ್ಡಿ ಬಾಗುತ್ತದೆ. ಮತ್ತೇನೆಂದರೆ ಗಿಡ್ಡ ಹಿರಿಯ ಕಸಬರಿಗೆಯ ಮೇಲ್ಗಡೆ ತಲೆ ಬಗ್ಗಿಸುವಾಗ ಸಮಾಜದಲ್ಲಿ ತಲೆ ಎತ್ತಿ ನಿಲ್ಲುವಂತೆಯೂ ನಿರೀಕ್ಷಿಸುವುದು ಸಾಧ್ಯವಲ್ಲ.

ಒಬ್ಬನ ಕೃತಿಯ ಅಕೃತಿಯನ್ನು ವಿಂಗಡಿಸುವಾಗ ಮನಸ್ಸಿನ ಒಲವಿನ ಮೇಲೆ ಅನಿವಾರ್ಯವಾದ ಪರಿಣಾಮ ಉಂಟಾಗುತ್ತದೆ ಎಂಬುದರಿಂದ ಕಸ ಗುಡಿಸುವವರು ತಾವಾಗಿ ಆಗ್ರಹಪೂರ್ವಕವಾಗಿ ನಿರ್ದಾಕ್ಷಿಣ್ಯವಾಗಿ ಕೊಡವಿಯನ್ನು ಗುಡಿಸಿ ಹಾಕಿ ಈ ಧರ್ಮಯುದ್ಧದಲ್ಲಿ ಭಾರತ ಪ್ರಧಾನರ ಕೈಗಳನ್ನು ಬಲಪಡಿಸಬೇಕು.

ಹೀಗೆ ಮಾಡುವುದಾದರೆ ಮಾತ್ರ ಕಸಬರಿಗೆ ಸಂಸಾರದ ಗುಡಿಸಿ ಹಾಕುವ



ಭಿಲ್ಲೈ ಉಕ್ಕಿನ ಕಾರ್ಖಾನೆಯಲ್ಲಿ 400 ಟನ್ ಭಾರದ ಉಕ್ಕಿನ ಕಟ್ಟೋಣವು ಚಕ್ರಗಳ ಮೇಲೆ ಚಲಿಸುತ್ತಿರುವುದು.

ಯೋಜನೆಯ ಯಶಸ್ಸಿಗಾಗಿ

ಆಡಳಿತದ ಯಂತ್ರ ಬಲವಾಗಬೇಕು

ಸರಕಾರದ ವಶವಿರುವ ಆನುಕೂಲ್ಯಗಳು ಮತ್ತು ಅವಕ್ಕೆ ಅನುಸಾರವಾಗಿ ಆಡಳಿತ ಶಾಖೆ ವಿವಿಧ ಕಾರ್ಯ ಯೋಜನೆಗಳಲ್ಲಿ ನಿರ್ವಹಿಸಬೇಕಾದ ದಕ್ಷತೆ ಮಿತ ವ್ಯಯ ಅಲ್ಲದೆ ತ್ವರಿತ ಗತಿ ಇವುಗಳ ಮೇಲೆ ನಮ್ಮ ಎಲ್ಲ ಯೋಜನೆಗಳ ಯಶಸ್ಸೂ ಅಧಾರಪಟ್ಟಿದೆ. ಇದುವರೆಗೆ ನಮ್ಮ ಪ್ರಭುತ್ವ ಆಡಳಿತ ಯಂತ್ರದ ಬಲ ಹೆಚ್ಚುವಂತೆ ಮಾಡಿರುವುದು ಹೆಚ್ಚೇನೂ ಇಲ್ಲ. ಕಂಟ್ರೋಲುಗಳು ಅಧಿಕವಾದಂತೆ ಸಮಾಜ ಸೇವಾ ವಲಯ ವಿಸ್ತಾರವಾದಂತೆ ಸಾರ್ವಜನಿಕ ವಿಭಾಗ ದೊಡ್ಡದಾಗುತ್ತ ಬಂದಂತೆ ಅಧಿಕಾರಿ ವರ್ಗದ ವ್ಯವಹಾರಗಳು ಹೆಚ್ಚಿ ನವುಕರಶಾಹಿ ಯಂತ್ರದ ಮೇಲೆ ಕೈಯಾಡಿಸಲು ಕಷ್ಟವೆನ್ನುವ ಸ್ಥಿತಿಗೂ ಬಂದಿತೆನ್ನಬಹುದು. ಹೊಣೆಗಾರಿಕೆ ವಿಶಾಲ ಪ್ರಮಾಣದಲ್ಲಿ ಹಬ್ಬುತ್ತದೆ; ಕಾಗದ ಪತ್ರಗಳ ಕಟ್ಟು ಹಿಂದಿಗಿಂತ ನಿಧಾನವಾಗಿ ಚಲಿಸುತ್ತಿವೆ. ಕೇಂದ್ರ ಮತ್ತು ರಾಜ್ಯ ಸರಕಾರಗಳೊಳಗೆ, ಕೆಲವು ವೇಳೆ ಬೇರೆ ಬೇರೆ ಸರಕಾರದ ಇಲಾಖೆಗಳೊಳಗೆ ಮುಗಿಯಲಾರದ ಕಚ್ಚಾಟಗಳೂ ನಡೆಯುತ್ತಿವೆ. ಸ್ಕೀಮುಗಳು ಅವಸರದಲ್ಲಿ ತಯಾರಾಗುತ್ತವೆ; ಅವುಗಳಲ್ಲಿ ಕೆಲವು, ಕೆಲ ಕೆಲವು ಸಣ್ಣ ಪುಟ್ಟ ಬದಲಾವಣೆಗಳ ಸಂಬಂಧ ವಿಳಂಬಕ್ಕೂ ಹಲವಾರು ತಿದ್ದುಪಾಟುಗಳಿಗೂ ನಿರಂತರವಾಗಿ ಗುರಿಯಾಗುವಾಗ ಮುಂಜೂಠಾತಿಯನ್ನು ತಡೆಹಿಡಿಯಲಾಗುತ್ತಿದೆ. ಮೇಲಾಗಿ ಸರಕಾರದ ವೆಚ್ಚದ ಬಾಬಿನಲ್ಲಿ ಸಮೃದ್ಧಿಯಾಗಿ ಹೆಚ್ಚಿದ ಅಂಶವನ್ನು ಕಾಣುವಾಗ ಅಲ್ಲಿ ಅನಾವ್ಯಯ ಮತ್ತು ಭ್ರಷ್ಟಾಚಾರಗಳಿಗೆ ಅವಕಾಶವಿದೆ ಎನ್ನದಿರಲಾಗದು.

ಆದ್ದರಿಂದ ಇವೆಲ್ಲ ಮೇಲ್ಕಂಡ ಕಾರಣಗಳ ಕುರಿತು ಯೋಚಿಸಿ ಆಡಳಿತದ ಯಂತ್ರವನ್ನು ಅದ್ಯಂತವಾಗಿ ದುರುಸ್ತಿ ಮಾಡುವ ಅವಶ್ಯಕತೆ ಇದೆ ಎಂದು ಯೋಜನಾ ಆಯೋಗದವರು ಒತ್ತಾಯಪಡಿಸಿರುವುದು ನ್ಯಾಯವೇ. ಇದು ಹೊಸದೇನೂ ಅಲ್ಲ. ಹಲವು ಸಮಿತಿಗಳೂ ಸಾರ್ವಜನಿಕ ಆಡಳಿತ ಕಾರ್ಯದ ತಜ್ಞರೂ ಕಾರ್ಯನೀತಿಯನ್ನು ಇನ್ನಷ್ಟು ಸ್ಪಷ್ಟವಾಗಿ ನಮೂದಿಸಬೇಕು, ಹೊಣೆಗಾರಿಕೆಯನ್ನು ಇನ್ನಷ್ಟು ಸ್ಪಷ್ಟವಾಗಿ ಹಂಚಿ ಕೊಡಬೇಕು, ಪತ್ರವ್ಯವಹಾರದ ಕಟ್ಟು ಓಡಾಡುವ ಕೈಗಳ ಸಂಖ್ಯೆ ಸರಳವಾಗಬೇಕು; ಅಲ್ಲದೆ ಮುಂಜೂರಾತಿ ಸಂಬಂಧದ ನಡವಳಿಕೆ ಕ್ರಮ ಹಾಗೂ ಪ್ರಾಜೆಕ್ಟುಗಳ ವಿಮರ್ಶಾ ರೀತಿ ಸರಳವಾಗಬೇಕು ಎಂದು ಬಾರಿ ಬಾರಿಗೂ ಹೇಳಿದ್ದಾರೆ. ಮುಂದಿನ ಐದು ವರ್ಷಗಳಲ್ಲಿ ವೃದ್ಧಿಕಾರ್ಯಗಳು ದೊಡ್ಡವಾಗಿರುವ ಕಾರಣ ಮೇಲೆ ಸೂಚಿಸಿದ ಸುಧಾರಣೆಗಳೆಲ್ಲ ಶೀಘ್ರವಾಗಿ ಜಾರಿಗೆ ಬರಬೇಕಾಗಿವೆ. ಆಡಳಿತದ ಯಂತ್ರದ ದುರಸ್ತಿಗಾಗಿ ಈಗಲೇ ಪ್ರಭುತ್ವ ವರ್ತಿಸದೆ ಹೋದರೆ ಮೂರನೆ ಯೋಜನೆ ಸಾಂಗವಾಗಿ ಸಾಗಿ ನಿರೀಕ್ಷಿಸಿದ ಫಲ ಕೊಡುವುದು ಸಂಶಯದ ಮಾತಾದೀತು.

ಆಡಳಿತ ಕಾರ್ಯದ ಹಲವು ಅಂತಸ್ತುಗಳಲ್ಲಿನ ಹೊಣೆಗಾರಿಕೆಯನ್ನು ಕಾರ್ಯರೂಪಕ್ಕೆ ತರುವಾಗ ಆದಕ್ಕೆ ವಿಘ್ನ ತಂದೊಡ್ಡುವ ನಿಯಮಗಳನ್ನು ತೆಗೆದು ಹಾಕುವುದು ಇದರಲ್ಲಾಗಬೇಕಾದ ಮೊದಲಿನ ಕೆಲಸ. ನಿರ್ದಿಷ್ಟಗೊಳಿಸಲಾದ ಕಾಲಕ್ಕೆ ಸರಿಯಾಗಿ ಫಲ ದೊರಕುವ ಹಾಗೆ ಆಯಾ ವೈಯಕ್ತಿಕ ಅಧಿಕಾರಿಯನ್ನು ಹೊಣೆಗಾರನನ್ನಾಗಿ ಮಾಡಬೇಕು. ಈಗೀಗ ಕೆಲಸದ ಒತ್ತಾಟ ಹೆಚ್ಚಿರುವುದರಿಂದ ಅತ್ಯುಚ್ಚ ಸ್ಥಾನದಲ್ಲಿರುವ ಜನರು ತಮ್ಮ ಕೈ ಕೆಳಗಿನವರಿಗೆ ಸರ್ವದಾ ಮಾರ್ಗ ತೋರಲು ಶಕ್ತರಾಗದೆ ಹೋಗಬಹುದು. ಆದ್ದರಿಂದಲೇ ಪ್ರತಿ ಇಲಾಖೆಯ ಮಧ್ಯಮ ತರಗತಿಯವರನ್ನು ಬಲಪಡಿಸಬೇಕಾದದ್ದು ಅತ್ಯಂತ ಅವಶ್ಯಕವೆನಿಸಿದೆ. ಅವರು ಮಾಡುವ ಪ್ರತಿ ಕೆಲಸದ ಸಣ್ಣ ಪುಟ್ಟ ವಿವರಗಳಲ್ಲಿಯೂ ಅವರ ಮೇಲಿನವರು ತಪ್ಪು ಕಂಡು ಹಿಡಿಯಲು ತಲೆ ಹಾಕಿದ್ದಾದರೆ ಆಡಳಿತದಲ್ಲಿನ ಮಧ್ಯಮ ಅಂತಸ್ತಿನವರಲ್ಲಿ ಹೊಣೆಗಾರಿಕೆ ಪ್ರಜ್ಞೆ ಬೆಳೆದು ಬರುವುದು ದುಸ್ತರವಾಗುತ್ತದೆ. ಅಂತಲೇ ಯೋಜನಾ ಆಯೋಗದವರೆನ್ನುವಂತೆ ಒಬ್ಬ ಸಾರ್ವಜನಿಕ ಸೇವಕನಿಗೆ ದತ್ತವಾಗಿರುವ ಅಧಿಕಾರ ಕ್ಷೇತ್ರದಲ್ಲಿ ಅವನ ತೀರ್ಮಾನದ ಕುರಿತು ಅನ್ಯರ ಪ್ರವೇಶವಿರಬಾರದು ಎಂಬುದು ವಿಹಿತ. ಆದರೆ ಇವೆಲ್ಲ ಸುಧಾರಣೆಗಳು ನಡವಳಿಕೆ ನಿಯಮಾವಳಿಗಳ ಬದಲಾವಣೆಯಿಂದಲೇ ಸಾಧಿಸಲ್ಪಡಲಾರವು. ಆಡಳಿತೆಯ ದಕ್ಷತೆಯನ್ನು ಹೆಚ್ಚಿಸಿಕೊಳ್ಳುವುದು ನಿರಂತರದ ಕೆಲಸವೆಂದು ಯೋಜನಾ ಆಯೋಗದವರೆಂದಿರುವುದು ವಾಸ್ತವಿಕ ದೃಷ್ಟಿಯ ನುಡಿ. ಆದ್ದರಿಂದಲೇ ಪ್ರತಿಯೊಂದು ರಾಜ್ಯದ ಸೆಕ್ರೆಟೇರಿಯೆಟಿನ ಕೆಲವು ಮಂದಿ ಹಿರಿಯ ಅಧಿಕಾರಿಗಳ ಒಂದು ಆಡಳಿತ ಕಾರ್ಯದ ಸಮಿತಿಯನ್ನು ರಚಿಸಿ; ಆ ಸಮಿತಿ ಆಡಳಿತದ ವಿಚಾರವನ್ನು ವಿಮರ್ಶಿಸಿ ಆ ಯಂತ್ರದಲ್ಲಿ ಎಡೆಬಿಡದೆ ಆಗಬೇಕಾದ ವೃದ್ಧಿ ಅಂಶಗಳ ಕುರಿತು ಸಲಹೆ ಮಾಡಲಿ ಎಂದು ಆ ಆಯೋಗದವರು ಶಿಫಾರಸು ಮಾಡಿರುವುದು ಒಪ್ಪತಕ್ಕದ್ದೇ. ಆದರೆ ಶ್ರಮ ವಹಿಸಿ ದುಡಿಯುವಲ್ಲಿ ಕಾರ್ಯದಕ್ಷತೆಯಲ್ಲಿ ಸಚಿವರು ತಾವೇ ಒಂದು ಮೇಲ್ಪಂಕ್ತಿ ಹಾಕಿ ಕೊಟ್ಟು ತಮ್ಮ ಕಚೇರಿಗಳಲ್ಲಿ ಈಗಿನಕ್ಕಿಂತ ಹೆಚ್ಚು ಹೊತ್ತು ಕಳೆಯದೆ ಹೋದರೆ ಆ ಸಮಿತಿ ಹೆಚ್ಚೇನನ್ನೂ ಸಾಧಿಸಲಾರದು. ಸಚಿವರು ಮನಃಪೂರ್ವಕವಾಗಿ ಕೆಲಸ ಮಾಡುವುದಾದರೆ ದೂರದ ಪ್ರದೇಶಗಳಲ್ಲಿ ಒಂದು ಸೇತುವೆ ಒಂದು ಆಣೆಕಟ್ಟು ಒಂದು ಶಾಲೆ ಒಂದು ಆಸ್ಪತ್ರೆ ಇತ್ಯಾದಿಗಳನ್ನು ತೆರೆಯಲು ಅವರಿಗೆ ಬಹು ಸ್ವಲ್ಪ ಸಮಯವೇ ದೊರಕೀತು. ಅವರಿಗಿರುವ ಎಲ್ಲ ಸಮಯವೂ ಜರೂರು ಪತ್ರಗಳನ್ನು ನೋಡಲಿಕ್ಕೆ ಕಾರ್ಯ ನೀತಿಯನ್ನ ರೂಪಿಸಲಿಕ್ಕೆ ಮುಖ್ಯವಾಗಿ ತಮ್ಮ ತೀರ್ಮಾನಗಳೆಲ್ಲ ಶೀಘ್ರಗತಿಯಲ್ಲಿಯೇ ಜಾರಿಗೆ ಬರುವಂತೆ ಏರ್ಪಡಿಸಲಿಕ್ಕೆ ಅವರಿಗೆ ಬೇಕು.

ಕೈಗಾರಿಕೆಯ ಕ್ಷೇತ್ರದಲ್ಲಿ ಪ್ರಧಾನ ಸ್ಥಾನಕ್ಕೆ ರಾಜ್ಯ ಶೀಘ್ರವಾಗಿಯೇ ಬರುತ್ತಿದೆ. ಹಾಗೆ ಸಾರ್ವಜನಿಕ ಸಾಹಸೋದ್ಯಮದ ಆಡಳಿತವನ್ನು ಬಲಪಡಿಸುವುದು ಅವಸರದ ಕಾರ್ಯವೇ ಆಗಿದೆ. ಮುಂದಿನ ಐದು ವರ್ಷಗಳಲ್ಲಿ ಸಾರ್ವಜನಿಕ ವಿಭಾಗದ ವೃದ್ಧಿ ಕಾರ್ಯಗಳಿಗೆ ಹಣದ ಸಹಾಯ ಮಾಡುವಂತೆ ಮೂರನೇ ಯೋಜನಾವಧಿಯಲ್ಲಿ ಬಹು ಕಡಿಮೆ ಎಂದರೆ ಒಳಗಂ ಕೋಟಿ ಉಳಿತಾಯವನ್ನು ಈ ಸಾಹಸೋದ್ಯಮಗಳಿಂದ ನಿರೀಕ್ಷಿಸಲಾಗಿದೆ. ಆದರೆ ಪ್ರತಿಯೊಂದು ಸಾರ್ವಜನಿಕ ಸಾಹಸೋದ್ಯಮದ ಕಾರ್ಯಾಚರಣೆಯಲ್ಲಿ ಮಿತವ್ಯಯ ದಕ್ಷತೆ ಐಕ್ಯತೆಗಳು ಅತ್ಯುಚ್ಚ ಅಂತಸ್ತಿನಲ್ಲಿ ನೆಲಸುವಂತೆ ಬಲವಂತ ಮಾಡುವ ಕಾರ್ಯವಿಧಾನವನ್ನು ಕೂಡಲೇ ಕೈಕೊಳ್ಳದ ವಿನ್ನಾ ಪ್ರಭುತ್ವದವರು ಈ ಉಳಿತಾಯವನ್ನು ನಿರೀಕ್ಷಿಸುವುದು ಕಷ್ಟ. ಸರಕಾರ ಆಡಳಿತ ಸಭೆಗೆ ಅಧಿಕಾರ ದಾನ ಮಾಡಿದ್ದಾಲದು. ಯೋಜನಾ ಸಮಿತಿಯು ಹೆಯಂತೆ ಸಿಬಂದಿಯಲ್ಲಿ ಯೋಗ್ಯ ಕ್ರಮದ ಸ್ಫೂರ್ತಿ ತುಂಬುವಂತೆಯೂ ಅಧಿಕಾರ ದಾನವಾಗಬೇಕು. ಮತ್ತು ಆ ದಾನ ಆಡಳಿತ ಸಭೆಯಿಂದ ಮುಂದೆ ಜನರಲ್ ಮೆನೇಜರುಗಳ ಅಲ್ಲದೆ ಆಡಳಿತ ನಾನಾ ಅಂತಸ್ತುಗಳಲ್ಲಿಯೂ ವ್ಯಾಪಕವಾಗಿ ಬೇಕು. ಹೀಗೆ ಇನ್ನೆಷ್ಟೋ ಶಿಫಾರಸುಗಳಿವೆ; ಉಪದೇಶಗಳಿವೆ; ಹಿತ ಸೂಚನೆಗಳಿವೆ. ಅವೇನಿದ್ದರೂ ಆದು ಆ ಯಂತ್ರವನ್ನು ಬಲಪಡಿಸಲಿಕ್ಕಾಗಿ. ಅಂತೆ ಈ ದುರಸ್ತಿ ಕಾರ್ಯಕ್ಕೆ ಕೈಹಚ್ಚಿ ಮುನ್ನಡೆಯಬೇಕಾದದ್ದು ಸರಕಾರದ ಕೆಲಸ.

(ಆಧಾರದಿಂದ)

ಕಾಲೋಚಿತವಾದ ಬಹು ದೊಡ್ಡ ಸುಧಾರಣೆಯಲ್ಲಿ ಸರಕಾರ ಅತ್ಯಂತ ಯಶಸ್ವಿಯಾಗುವುದು ಸಾಧ್ಯವಾದೀತೆಂಬುದು ನಿರ್ವಿವಾದ.

o oo o

ಮುಷ್ಕರದ ಕೊನೆ

ಕಳೆದ ವಾರಾಂತ್ಯದಲ್ಲಿ ಪ್ರಕಟವಾದ ವಾರ್ತೆಗಳ ಮೇರೆಗೆ ದೇಶದ ಮತ್ತು ಜಿಲ್ಲೆಯಲ್ಲಿನ ಆಂಚೆ ತಂತಿ ಟೆಲಿಫೋನ್ ಮತ್ತಿತರ ಶಾಖೆಯ ಮುಷ್ಕರ ಇಷ್ಟರಲ್ಲೇ ಪೂರ್ತಿಯಾಗಿ ಮುಗಿಯುವ ಶುಭ ಸಮಾಚಾರದ ಭೇರವಸೆಯುಂಟಾಗಿದೆ. ಮುಷ್ಕರ ಕಾಲದಲ್ಲಿ ಸಾರ್ವಜನಿಕರ ಪರ ನೀಡಲಾದ ಸಹಾಯ ಸಹಕಾರ ಪ್ರಶಂಸನೀಯವಾಗಿದೆ. ಈಗ ಈ ಮುಷ್ಕರ ಮುಗಿದಿದೆ.

ಜಿಲ್ಲೆಯಲ್ಲಿನ ಎಲ್ಲ ಪೊಸ್ಟಾಫೀಸುಗಳೂ ಕೆಲಸ ಮಾಡುತ್ತಿವೆ

ಜಿಲ್ಲೆಯಲ್ಲಿ ಮತ್ತು ಮಂಗಳೂರಲ್ಲಿ ೫ ದಿನದ ಮುಷ್ಕರ ನಿಂತು ಎಲ್ಲ ಆಂಚೆತಂತಿ ಕಚೇರಿಗಳ ಸಿಬಂದಿಯೂ ಎಂದಿನಂತೆ ಕೆಲಸ ಮಾಡ ತೊಡಗಿವೆ. ಆದರೆ ಮುಷ್ಕರದ ಸಮಯ ಬಂಧಿಸಲಾಗಿದ್ದ ಜಿಲ್ಲೆಯ ಆಂಚೆ ಕೆಲಸಗಾರರು ಕೆಲವರನ್ನು ಅವಮಾನತು ಪಡಿಸಲಾಗಿದೆ ಎಂತಿಳಿದು ಬಂದಿದೆ.

ಹೇಗೆ....?

ಮಾವಿನ ಕಾಯಿಯೊಂದು ಇಂದು ಕಾಯಿಯಾಗಿರಬಹುದು; ಆದನ್ನ ಕೆಲವು ದಿನಗಳ ವರೆಗೆ ಇರಗೊಡಿರಿ. ಆದರಲ್ಲೊಂದು ವಿಚಿತ್ರ ಬಾಲಾವಣೆಯಾಗಿ ಅದು ಬಣ್ಣ ರುಚಿಗಳಿಂದ ಕೂಡಿದ ಹಣ್ಣಾಗುವುದು.

ಹಣವೂ ಹಾಗೆಯೇ

ಹಣವನ್ನು ಉತ್ತಮ ಉದ್ಯಮಗಳಲ್ಲಿ ತೊಡಗಿರಿ. ಬಡ್ಡಿಗೆ ಬಡ್ಡಿ ಕೂಡಿ ಅದು ವೃದ್ಧಿಯಾಗುತ್ತಿರಲಿ. ಹೀಗೆ ೧೦೦೦ ರೂಪಾಯಿಗಳಂತೆ ೩೫ ವರುಷಗಳಲ್ಲಿ ವಿನಿಯೋಗಿಸಿದಿರೆನ್ನೋಣ. ಆಗ ಅದು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗಿ ವೃದ್ಧಿಯಾಗಬಲ್ಲುದು.

ಹೀಗೆ ಅಧಿಕ ಪ್ರತಿಫಲ ಬರುವಂತೆ ಹೇಗೆ ತೊಡಗಬೇಕು?

. . . . ಇದಕ್ಕಾಗಿಯೇ

ಇನ್ವೆಸ್ಟರ್ಸ್ ಏಜನ್ಸಿ

(ರೂ. ೩೫೦ರಿಂದಲೂ ನೀವು ಪ್ರಾರಂಭಿಸಬಹುದು)

ವಿವರಗಳಿಗೆ:

ಇನ್ವೆಸ್ಟರ್ಸ್ ಏಜನ್ಸಿ ಡಿಪಾರ್ಟ್‌ಮೆಂಟ್

ಸಿಂಡಿಕೇಟ್ ಬೇಂಕ್

KANTEERAVA
KANARESE, BI-WEEKLY

೪೨] ಮಂಗಳೂರು, ತಾರೀಕು ೧೯—೭—೧೯೬೦ [೧೬
ಶಾರ್ವರಿ ನಾಮ ಸಂವತ್ಸರದ ಆಷಾಢ ಬ| ೧೧ ಮಂಗಳವಾರ

ದುಷ್ಕೃತ್ಯಗಳ ದೂರವಾಯಿತು

ಹಾಗಾದದ್ದು—ಅಗಬಾರದ್ದೇ ಆಯಿತು. ರಾಜ್ಯ ಭಾಷೆಯ ಸಂಬಂಧ ಅಸಾಮಿನಲ್ಲಿ ದ್ವೇಷಪೂರಿತವಾದ ಹಿಂಸಾಕೃತ್ಯಗಳು ಗೆ ನಡೆದು ಆ ಗಲಭೆಯಲ್ಲಿ ಸಾವಿ ಮಂದಿ—ಮುಖ್ಯವಾಗಿ ಬಂಗಾಳಿ ಹೆಚ್ಚಾಗಿ ಬಡವರು—ನಾನಾ ಯ ಅಗಾಧ ಕಷ್ಟನಷ್ಟಗಳಿಗೆ ಗುರಿ ಯಾಗಿ ಆ ಗಾಯಕ್ಕೆ ಲೇಪ ಹಾಕಲು ನಮ್ಮ ರಾಷ್ಟ್ರ ನಾಯಕರು ತವಕಿಸುತ್ತಿ ದ್ದಾಗಲೇ, ಕೇಂದ್ರ ಸರಕಾರದ ಉದ್ಯೋ ಗಿಗಳು ಸಾರ್ವತ್ರಿಕ ಮುಷ್ಕರ ಹೂಡಲು ಮುಂದಾದದ್ದು ದುಷ್ಕಾಲದ ದುರ್ವಿಧಿ ಎನ್ನಬೇಕು. ಅಸಾಮಿನಲ್ಲಿ ನಡೆದದ್ದು ಜನಗಳೊಳಗಿನ ಕಾದಾಟವೆಂದರೆ ಕೇಂ ದ್ರದ ಉದ್ಯೋಗಿಗಳ ಚಳವಳ ಪ್ರಭುತ್ವದ ವಿರುದ್ಧ; ಅದಕ್ಕೂ ಮಿಗಿಲೆನ್ನಿಸಿ ಜನಜೀ ವನದ ಮೇಲೆ ಪರಿಣಾಮಗೊಳ್ಳುವ ಒಂದು ಆಂದೋಲನ ಎಂದು ಭಾವಿಸಿದವ ರಿದ್ದಾರೆ. ಅಸಾಮಿನದು ಒಂದು ರಾಜ್ಯಕ್ಕೆ ಸಂಬಂಧಪಟ್ಟದ್ದರೆ ಮುಷ್ಕರದ ಮಾತು ಇಡಿಯ ದೇಶಕ್ಕೇ ಅನ್ವಯಿಸುತ್ತದೆ. ಗಂಭೀರದಾಗಿದ್ದ ಇದರಲ್ಲಿ ಯಾವುದು ಹೆಚ್ಚಿದು ಮಹತ್ವದ್ದು ಎಂದು ಬೇರೆ ಹೇಳಬೇಕಾಗಿಲ್ಲ.

ಮುಷ್ಕರದ ಔಚಿತ್ಯದ ಕುರಿತು ಹೇಳಬೇಕಿಲ್ಲ. ಆದರೆ ನಡೆದು ಮುಷ್ಕರದ ವಿದ್ಯಮಾನಗಳು ಳಸಿದಂತೆ ಅದು ನಿರರ್ಥಕವೂ ೋಗಿಯೂ ಅನಾವಶ್ಯಕವೂ ಆಗಿ ದು ನಿರ್ವಿವಾದ. ಅಂತೆ ಅದನ್ನು ಡೆಲೇ ನಿಲ್ಲಿಸಬೇಕೆಂದು ಹಲವರೂ ಆಶ್ತಾಯಿಸಿರುವುದಾದರೂ ವಿಹಿತವೇ. ಮುಷ್ಕರದ ಯತ್ನ ಮಾಡಿಯೂ ಆದ ದ್ದೇನು? ಕೇಂದ್ರ ಉದ್ಯೋಗಿಗಳಲ್ಲಿ ಹೆಚ್ಚಿನವರು ಉಪ್ಪನ್ನ ಕೊಡುವ ದೊರೆತ ನದವರಲ್ಲಿ ಸ್ವಾಮಿನಿಷ್ಠೆಯಿಂದ ವರ್ತಿಸಿ ಕರ್ತವ್ಯ ಪಾಲಿಸಿದ ಕಾರಣ ಮುಷ್ಕರ ವ್ಯರ್ಥವಾದುದರಲ್ಲಿ ಆಶ್ಚರ್ಯವೇನಿಲ್ಲ. ಯಾವುದು ಮುಷ್ಕರದ ಉದ್ದೇಶವಾ ಗಿತ್ತೋ ಆದು ಸಾಧ್ಯವಾಗಲಿಲ್ಲ. ಅದಕ್ಕೆ ಬದಲು ಪ್ರಭುತ್ವ ಭದ್ರಮುಷ್ಟಿಯಿಂದ ಈ ಮುಷ್ಕರವನ್ನು ತನ್ನ ಗೌರವದ ಹಾಗೂ ಸರ್ವಜನಿಕ ಹಿತದೃಷ್ಟಿಯಿಂದ ನಿಶ್ಶಕ್ತವಾಗಿ ಮಾಡಲು ಯಾವ ಕಾರ್ಯ ಕ್ರಮಗಳನ್ನು ಕೈಕೊಳ್ಳಬೇಕಾಗಿತ್ತೋ ಅದನ್ನೆಲ್ಲ ಕೈಗೊಂಡಿತೆಂದು ಅದನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಸಹಕಾ ರವನ್ನೂ ನೀಡಲು ಮುಂದೆ ಬಂದ ಆ ದೇಶಂಭಾವಾನಿಗಳ ಸಂಖ್ಯೆಯನ್ನು ನೋ ಡಿದರೆ ಈ ಮುಷ್ಕರ ಬಹು ಪಕ್ಷದ ಜನ ತೆಯ ಸಹಾನುಭೂತಿಯನ್ನು ಕೂಡ ಕಳೆ ದುಕೊಂಡಿತ್ತೆಂಬುದು ಸ್ಪಷ್ಟ.

ಮುಷ್ಕರ ಹೂಡುವ ಮುನ್ನ ಹೊಸ ಡಿಲ್ಲಿಯಲ್ಲಿ ಸಂಧಾನದ ಮಾತು ನಡೆದಿ ದ್ದಾಗ ಸರಕಾರ ಕೊಡಲು ತಯಾರಿದ್ದ ಮತ್ತು ಕೆಲಸಗಾರರಿಗೆ ಬೇಕಾಗಿದ್ದ ಅಂಶ ಗಳ ಅಂತರ ಹೆಚ್ಚಿರಲಿಲ್ಲವೆಂದೂ ಸದ್ಯ ಅದರಿಂದ ತೃಪ್ತರಾಗಿ ಕೇಂದ್ರ ಉದ್ಯೋಗಿ ಗಳ ಮುಷ್ಕರವನ್ನು ಹಿಂದೆಗೆಯುವಂತೆ ಶ್ರೀ ಆಲ್ವಾರಿಸರನ್ನು ಒಡಂಬಡಿಸಲಾಯಿ ತೆಂದೂ ಹೇಳಲಾಗಿದೆ. ಆದರೆ ಕೊನೆಗೆ ಅವರು ಏಕೋ ಅದನ್ನು ಸ್ವೀಕರಿಸಲು ಮನಸ್ಸು ಮಾಡದೆ ಹೋದದ್ದು ಅದೂ ದುಷ್ಕಾಲದ ಇನ್ನೊಂದು ದುರ್ವಿಧಿ ಎನ್ನದೆ ಉಪಾಯವಿಲ್ಲ.

ಶ್ರೀಗಳಾದ ಅಶೋಕ ಮೇಥಾ ಗುರು ಸ್ವಾಮಿ ಮೊದಲಾದ ಮಹನೀಯರು ಈಚೆಗೆ ಸಂಬಂಧಪಟ್ಟ ಕೇಂದ್ರ ಸಚಿವರು ಗಳನ್ನು ಕಂಡು ಈ ಮುಷ್ಕರವನ್ನು ಮುಗಿ ಸುವ ಯತ್ನದಲ್ಲಿ ಯಶಸ್ವಿಗಳಾದಾರೇ ಹೇಗೆಂಬುದು ಇಷ್ಟರಲ್ಲೇ ಪ್ರಕಟವಾ ದೀತು. ಅವರ ಸಂಧಾನ ಯತ್ನದಿಂ ದಲೇ ಆಗಲಿ ಇತರ ಕಾರಣಗಳಿಂದಲೇ ಆಗಲಿ—ಅಂತೂ ಮುಷ್ಕರ ನಿಲ್ಲಬೇಕು. ಅಂತೆ ಅದು ನಿಂತಿತೆಂಬ ವಾರ್ತೆ ನಮ್ಮ ಕಿವಿಗೆ ಇಷ್ಟರಲ್ಲೇ ಬೀಳುವ ಆ ಶುಭ ಮುಹೂರ್ತಕ್ಕಾಗಿ ನಾವೆಲ್ಲ ಕಾದಿರುವ; ದೇಶದ ಈ ದುಷ್ಕಾಲದ ದುರ್ವಿಧಿ ದೂರ ವಾಗಲೆಂದು ಹಾರೈಸುವ—ಎನ್ನುವಾ ಗಲೇ ಕೇಂದ್ರ ಸರಕಾರಿ ಸಂಘಗಳ ಜತೆ ಕ್ರಿಯಾ ಸಮಿತಿ ಮುಷ್ಕರವನ್ನು ಹಿಂದೆಗೆ ಯಿತೆಂಬುದು ದೇಶಕ್ಕೆಲ್ಲ ಬಹು ಸಂತೋ ಷವನ್ನು ಉಂಟುಮಾಡಿದೆ.

——

"ಕಂಠೀರವ"ನಿಗೆ
ಚಂದಾದಾರರಾಗಿರಿ

ಕಳೆದ ವಾರದಲ್ಲಿ

ಮುಷ್ಕರ—ಅದರ ಕೆಲವು ವಿವರ

ತಾ. ೧೫ರ ಅರ್ಧ ರಾತ್ರಿಯಲ್ಲಿ ಆರಂಭವಾದ ಕೇಂದ್ರ ಉದ್ಯೋಗಿಗಳ ಮುಷ್ಕರದ ಕಾರ್ಯತ್ಯಾಗದ ಸ್ಥಿತಿ ಅನಂತರದ ೨೪ ಗಂಟೆಗಳ ಅವಧಿಯಲ್ಲಿ ನಿರೀಕ್ಷಿಸಿದಂಥ ಮಹಾ ಪರಿಣಾಮವ ನ್ನೇನೂ ಉಂಟುಮಾಡಿಲ್ಲ. ಮುಷ್ಕರದ ಕರೆಗೆ ದೊರಕಿದ ಬೆಂಬಲ ಕೇವಲ ಕ್ಷೀಣ ಗತಿಯದ್ದು; ರೈಲ್ ಆಂಚೆ ತಂತಿ ಟೆಲಿ ಫೋನ್ ವ್ಯವಹಾರಗಳು ತೃಪ್ತಿಕರವಾದ ರೀತಿಯಲ್ಲಿ ನಡೆದಿವೆ. (ಈಗ ಮುಗಿದಿರುವ) ಈ ಮುಷ್ಕರ ಹೆಚ್ಚು ದಿನ ಬಾಳಲಾರ ದೆಂಬ ಭರವಸೆ ಉಚ್ಚ ಅಧಿಕಾರಿಗಳದಾ ಗಿದೆ—ಎಂದು ಡಿಲ್ಲಿ ವಾರ್ತೆ.

ಪ್ರಕೃತ ದೇಶದ ಹಲವೆಡೆಗಳಲ್ಲಿ ನಡೆದಿ ರುವ ಮುಷ್ಕರದ ಕೆಲವು ವಿದ್ಯಮಾನಗಳು ಹೀಗಿವೆ—ಬೊಂಬಯಿಯ ಪರೇಲ್ ಮತ್ತು ಮಾತುಂಗ ರೈಲ್ವೆ ವರ್ಕ್ ಶಾಪು ಗಳಲ್ಲಿ ತೊಂದರೆಗಳುಂಟಾಗಿವೆ. ದಕ್ಷಿಣ ಗುಜರಾತಿನ ದೋಹದ್ ವರ್ಕ್ ಶಾಪಿನ ವಠಾರದಲ್ಲಿ ಪೋಲೀಸರು ಗುಂಡು ಹಾರಿಸ ಬೇಕಾದ ಪ್ರಮೇಯ ಒದಗಿ ಐವರು ಮಡಿದು ಇಬ್ಬರು ಗಾಯಗೊಂಡಿದ್ದಾರೆ. ಲಕ್ನೋವಿನ ಚಾರ್‌ಭಾಗ್ ವರ್ಕ್‌ಶಾಪಿ ನಲ್ಲಿ ಕೆಲಸಗಾರರು ಒಳಗಡೆ ಇದ್ದು ಬಾಗಿಲು ಮುಚ್ಚಿಕೊಂಡಿದ್ದಾರೆ. ಅಲ್ಲಲ್ಲಿ ಜನತಂಡದ ಹಿಂಸಾ ಕಾರ್ಯಗಳೂ ಪುಂ ಡತನವೂ ಪೂರ್ವದ ಮತ್ತು ದಕ್ಷಿಣ ಪೂರ್ವದ ರೈಲ್ವೆಗಳಲ್ಲಿ ಹಾನಿಕಾರಕ ದುಷ್ಕಾರ್ಯಗಳೂ ಕಂಡು ಬಂದಿವೆ.

ಮುಷ್ಕರದ ಮರುದಿನ ಡಿಲ್ಲಿ ಸೆಕ್ರೆಟೇರಿ ಯೆಟ್‌ನಕೆಲಸ ಕಾರ್ಯ ಅಷ್ಟಿಷ್ಟೂ ಸಾಗಿದೆ. ಬೊಂಬಯಿ ನಗರದಲ್ಲಿ ಅಂಚೆ ಕೆಲಸಗಾ ರರಲ್ಲಿ ಬಹು ಪಕ್ಷದವರು ಕೆಲಸಕ್ಕೆ ಬಾರ ದಿದ್ದರೂ ಅದರಿಂದ ಹೇಳಹೆಸರುವಂಥ ದುಃಸ್ಥಿತಿ ಏನೂ ಉಂಟಾಗಿಲ್ಲ. ಕೇಂದ್ರ ಸರಕಾರಿ ಉದ್ಯೋಗಿ ಸಂಘದ ಜತೆ ಕ್ರಿಯಾ ಸಮಿತಿಯ ಶ್ರೀ ಪೀಟರ್ ಆಲ್ವಾರೀಸ್ ಅವರನ್ನು ಬಂಧಿಸಲಾಗಿದೆ. ಪ್ರಾ ಮುಖ್ಯ ಸಾಮಗ್ರಿಗಳ ಸಾಗಾಟದ ಮೇಲೆ ಬೊಂಬಯಿಯಲ್ಲಿ ಈ ಮುಷ್ಕ ರದ ಪರಿಣಾಮ ಆಗಿಲ್ಲವಾದರೂ ಕೇಂದ್ರ ಸರಕಾರಿ ಕಚೇರಿಗಳಲ್ಲಿ ಜನರಿರ ಲಿಲ್ಲ.

ಆ ಮೇಲಿನ ವಾರ್ತೆಗಳವು:—ಮುಷ್ಕ ರದ ಸ್ಥಿತಿ ಸುಧಾರಿಸುತ್ತ ಬಂದಿದೆ. ಜನ ಜೀವನಕ್ಕೆ ಅವಶ್ಯಕವಾದ ಸೇವೆಯನ್ನು ತಕ್ಕಷ್ಟಾಗಿ ಒದಗಿಸಲಾಗುತ್ತಿದೆ. ಕೆಲವು ಕಡೆ ಪೋಲೀಸರ ಲಾಠಿ ಚಾರ್ಜು ಗೋಳಿ ಬಾರು ನಡೆದಿದ್ದರೂ ಗುಂಡಿನೇಟಿನಿಂದ ಸತ್ತವರಿಲ್ಲ. ಬೊಂಬಯಿ ಪೋರ್ಟ್ ಟ್ರಸ್ಟಿನ ಬಂದರದ ಕೆಲಸಗಾರರು ಮುಷ್ಕರ ಆರಂಭಿಸುವ ಏಂಟು ಗಂಟೆಗಳ ಮೊದಲೇ ಕೆಲಸ—ನಿಲ್ಲಿಸಿದ್ದರು. ಅಲ್ಲಿ ಕೇಬಲ್ ಲ್ಯಾನ್ ಕತ್ತರಿಸಿದ್ದು ಕಂಡು ಬಂದಿತ್ತು. ಹೌರಾ—ಅಸನ್‌ಸೋಲ್ ರೈಲ್ವೆಯಲ್ಲಿ ರೈಲ್ವೆಉದ್ಯೋಗಿಗಳನ್ನು ತಡೆಗಟ್ಟುವ ಕಾರ್ಯ ಭಾಗಗಳಿಂದ ರೈಲಿನ ವಹಿವಾಟ ಅಸ್ತವ್ಯ ಸ್ತವಾಗಿತ್ತು. ಕಲ್ಕತ್ತೆಯಲ್ಲಿ ಟ್ರೈನುಗಳ ಓಡಾಟ ಈಚಿಗೆ ಉತ್ತಮಗೊಂಡಿದೆ. ಬೊಂಬಯಿಯಲ್ಲಿ ಮನೆ ಮನೆ ಕಾಗದ ಬಟವಾಡೆ ಏರ್ಪಾಡಾಗಿದೆ. ಬೊಂಬಯಿ ಉಪ ನಗರಗಳ ಟ್ರೈನುಗಳಲ್ಲಿ ಜನ ತುಂಬಿ ಟಿಕೆಟ್ ಇಲ್ಲದೆ ಪ್ರಯಾಣಿಸುವವರ ಸಂಖ್ಯೆ ಹೆಚ್ಚಿದೆ ಎಂದು ಮುಷ್ಕರದ ಎರಡನೆ ದಿನ ಕಂಡುಕೊಳ್ಳಲಾಗಿದೆ.

ಕಳೆದ ಜುಲ್ಯಾ ತಾ. ೧೩ರ ವರೆಗೆ ದೇ ಶದಾದ್ಯಂತ ಸುಮಾರು ೩೫೦೦ ಬಂಧನ ದಿಯನ್ನು ಈ ಮುಷ್ಕರದ ಮತ್ತು ದುಷ್ಕಾ ರ್ಯಗಳ ಸಂಬಂಧ ಕೈದು ಮಾಡಿರುವು ದಾಗಿ ವರದಿ.

ಬೊಂಬಯಿಯ ಹಿಂದಿನ ಒಬ್ಬ ಮೇ ಯರರೂ ಕಮ್ಯುನಿಸ್ಟ್ ಮುಖಂಡರೂ ಆದ ಶ್ರೀ ಎಸ್. ಎಸ್. ಮಿರಜ್‌ಕರರ ಕೈದು ಬೊಂಬಯಿಯಲ್ಲಾಗಿದೆ. ಅಲ್ಲದೆ ಕೇಂದ್ರ ಸರಕಾರಿ ಉದ್ಯೋಗಿ ಸಂಘದ ಕ್ರಿಯಾ ಸಮಿತಿಯ ಇಬ್ಬರು ಪ್ರಮುಖ ಸದಸ್ಯರಾದ ಶ್ರೀ ಎಸ್. ಎಂ. ಜೋಶಿ ಮತ್ತು ಶ್ರೀ ನಾಥ ಪೈಯವರನ್ನೂ ಅಲ್ಲೇ ನಿರ್ಬಂಧಕ್ಕೊಳಪಡಿಸಲಾಗಿದೆ.

ಬೆಂಗಳೂರಿನ ಸಿವಿಲ್ ವಿಮಾನ ಶಾಖೆಯ ಎಲ್ಲ ಸಿಬಂದಿಯೆವರೂ ಆ ೬೯ ಮಂ ದಿಯೂ ತಾವು ಕೊಟ್ಟದ್ದ ಮುಷ್ಕರದ ನೋಟೀಸು ಹಿಂದೆಗೆದು ಕೆಲಸಕ್ಕೆ ಹಾಜ ರಾಗಿದ್ದಾರೆ. ಕೇಂದ್ರ ಸರಕಾರದ ನಾನಾ ಇಲಾಖೆಯ ಕಾರ್ಯಾಲಯಗಳಿಗೆ ಬಂದು ಸೇರಿಕೊಳ್ಳುತ್ತಿರುವ ಉದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ.

ಅಹಮ್ಮದಾಬಾದಿನ ಬಳಿ ರೈಲ್ ಉರು ಳಿಸುವ ಮೂರು ಯತ್ನಗಳಾದಂತೆ ವರದಿ. ಈ ಉದ್ಯೋಗಿಗಳ ಮುಷ್ಕರ ನಿಲ್ಲುವಂತೆ ಡಿಲ್ಲಿಯಲ್ಲಿ ಸಂಧಾನದ ಮಾತುಕತೆ ಹೊಸ ದಾಗಿ ನಡೆದಿದೆ. ಈ ಮುಷ್ಕರದ ಸಂ ಬಂಧ ದೇಶದ ಕೆಲವು ಕಡೆ ನಡೆದ ಸಾಂ ಕೇತಿಕ ಮುಷ್ಕರಗಳು ಬಂಗಾಳದ ಹೊರ ತಾದ ಇತರ ಕಡೆ ಅಷ್ಟೇನೂ ಯಶಸ್ವಿಯಾ ಗಿಲ್ಲ. ಕಳೆದ ಶನಿವಾರದಿಂದ ಮದ್ರಾಸ್ ರಾಜ್ಯದಲ್ಲೆಲ್ಲ ಮನೆಗಳಿಗೆ ಕಾಗದ ಬಟ ವಾಡೆ ಆರಂಭವಾಗಿದೆ. ಕೇರಳದಲ್ಲಿ ಮುಷ್ಕರವಾಗಲೇ ಮುಗಿದಂತೆಯೇ. ಮೈಸೂರಲ್ಲಿ ಅಂಚೆ ತಂತಿ ರೈಲ್ವೆ ಶಾಖೆಗ ಳಲ್ಲಿ ನಿತ್ಯಕೃತ್ಯದ ಅಂತಸ್ತು ಬಹಳ ಮಟ್ಟಿಗೆ ಉತ್ತಮಗೊಂಡಿದೆ.

ಮುಷ್ಕರದಲ್ಲಿ ಭಾಗಿಗಳಾದ ಹಲವು ಕೇಂದ್ರ ಸರಕಾರದ ಉದ್ಯೋಗಿಗಳಿಗೂ ಅವರಿಗೆ ಪ್ರೇರಣೆ ಬೆಂಬಲ ನೀಡಿದವರಿಗೂ ದೇಶದ ಹಲವು ಕಡೆ ಜುಲ್ಮಾನೆ ಮತ್ತು ಕಠಿನ ಸಜೆ ವಿಧಿಸಲಾಗಿದೆ.

ತಮ್ಮ ತಮ್ಮ ಕೆಲಸದ ಮೇಲೆ ಕಾರ್ಯಾಲಯಗಳಿಗೆ ಹಾಜರಾಗದ ಸುಮಾರು ೧೮೦೦ ಮಂದಿ ಉದ್ಯೋಗಿಗಳಿಗೆ ಅಮಾನತಿನ ಹುಕುಂ ಮತ್ತು ೨೦೦೦ ಮಂದಿಗೆ ಕೆಲಸದಿಂದ ತಳ್ಳಿ ಹಾಕುವ ನೋಟೀಸ್ ಕೇಂದ್ರ ಸರಕಾರ ಆಗಲೇ ಕೊಟ್ಟಿದೆ. ಇನ್ನು ಇದೇ ರೀತಿಯ ಆಜ್ಞೆ ಹೊರಡಿಸಲಾಗುತ್ತಿದೆ.

ಸದ್ಯ ಈ ಮುಷ್ಕರ ನಿಶ್ಶರ್ತವಾಗಿ ಹಿಂತೆಗೆಯಲಾಗಿದೆ.

——

ಪ್ರಚಲಿತ ಸಮಾಚಾರ

ಕೃಷಿ ವಿಶ್ವವಿದ್ಯಾ ನಿಲಯ

ಭಾರತದಲ್ಲೇ ಪ್ರಥಮವಾದ್ದೆನ್ನಲಾದ ಕೃಷಿವಿದ್ಯಾ ನಿಲಯ ಈಚೆಗೆ ಫೈಲ್‌ಬಾಗಿನಲ್ಲಿ ಕಾರ್ಯಾರಂಭ ಮಾಡಿದೆ. ಪೂರ್ತಿಯಾಗಿ ಗ್ರಾಮ ವಾತಾವರಣದಲ್ಲಿರುವ ಈ ವಿದ್ಯಾನಿಲಯದಲ್ಲಿ ಹಲವಾರು ವೈಶಿಷ್ಟ್ಯಗಳು ಕಂಡು ಬಂದಿವೆ. ಅವು ಈ ದೇಶದ ವಿಶ್ವವಿದ್ಯಾನಿಲಯಗಳ ಶಿಕ್ಷಣ ಕಾರ್ಯದಲ್ಲಿ ಹೊಸ ಯುಗವನ್ನೇ ಆರಂಭಿಸಿದಂತಿದೆ. ಇಲ್ಲಿ ಸ್ವಪ್ರಯಾಸ ಕ್ರಮಕ್ಕೆ ಪ್ರಾಶಸ್ತ್ಯ ನೀಡಲಾಗಿದೆ. ಇಲ್ಲಿ ಪೇದೆ ಅಥವ ಜವಾನರೂ ಚಪ್ರಾಸಿಗಳೂ ಇಲ್ಲ. ಸಬಂದಿಯವರೇ ತಮ್ಮ ಕಚೇರಿಯ ಎಲ್ಲ ಕೆಲಸವನ್ನೂ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ದಿನದಲ್ಲಿ ಸ್ವಲ್ಪ ಹೊತ್ತು ಬೆಳಿ ಕೆಲಸ ನೋಡಿ ಸಂಪಾದಿಸುವ ಅವಕಾಶವಿದೆ. ಹೊಸ ಮಾದರಿಯ ಬೇಸಾಯದ ಮುಂದಾಳು ಮತ್ತು ಆಡಳಿತಗಾರರನ್ನು ತರಬೇತಿಗೊಳಿಸುವ ಭರವಸೆಯನ್ನು ಈ ವಿಶ್ವವಿದ್ಯಾನಿಲಯ ನೀಡಿದೆ.

೦ ೦೦ ೦

ದೋಣಿಯ ದುರಂತ

ಮೆಟ್ಟಪಲ್ಲಿ ದೇವಸ್ಥಾನದ ಬಳಿ ಕಳೆದ ಮೇ ತಿಂಗಳಲ್ಲಿ ದೋಣಿ ದುರಂತಕ್ಕೀಡಾಗಿ ಮಡಿದ ಯಾತ್ರಾರ್ಥಿಗಳ ವಿಷಯದಲ್ಲಿ ಅನ್ವೇಷಿಸಲು ಆಂಧ್ರ ಪ್ರದೇಶ ಸರಕಾರದಿಂದ ನಿಯೋಜಿತವಾದ ಮೂರು ಮಂದಿಯ ಸಮಿತಿ ಇದೀಗ ವರದಿಯೊಪ್ಪಿಸುತ್ತ ಕಡವುಗಳಲ್ಲಿ ದೋಣಿ ಚಲಾಯಿಸುವ ಕುರಿತು ಸಂಪೂರ್ಣವಾದ ಒಂದು ಶಾಸನ ರಚನೆಯಾಗುವಂತೆ ಸೂಚಿಸಿದೆ. ಈಗಿರುವ ಕಾನೂನಿನಂತೆ ದೋಣಿಗಳನ್ನು ರಿಜಿಸ್ಟ್ರಿ ಮಾಡುವ ಅಗತ್ಯವಿದೆಯೇ ಎಂಬುದು ಸ್ಪಷ್ಟವಾಗಿಲ್ಲ. ಆದ್ದರಿಂದ ಇಂಥ ಜಲ ದುರಂತಗಳು ಸಂಭವಿಸಿದಾಗ ತಪ್ಪಿಗಾರರು ತಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದು ಸುಲಭವಾಗುತ್ತದೆ. ಹಲವು ಸಲ ಕಡವಿನ ದೋಣಿಯವರು ದೋಣಿಗಳಲ್ಲಿ ವಿಪರೀತ ಜನಗಳನ್ನು ತುಂಬಿಸಿ ಇಂಥ ಅವಘಡಗಳು ಉಂಟಾಗುವ ಕಾರಣ ಅಂಥವರಿಗೆ ದಂಡನೆಯಾಗಬೇಕೆಂದು ಸಮಿತಿ ಅಂದಿರುವುದು ವಿಹಿತ.

ಮೇಲಾಗಿ ನದಿಗಳ ಪಕ್ಕದಲ್ಲಿರುವ ಎಲ್ಲ ದೇವಸ್ಥಾನಗಳ ಉತ್ಸವಾದಿ ಪರಿಶೀಲನೆ ನಡೆಸಿ ಧಾರ್ಮಿಕ ಉಂಬಳಿ ಇಲಾಖೆಯವರು ಆ ದೇವಸ್ಥಾನಗಳಿಗೆ ಈ ಉತ್ಸವಗಳ ಸಂಬಂಧ ಬರತಕ್ಕ ಆದಾಯದ

ಭಾರತದ ಮಿತ್ರರಾಷ್ಟ್ರ

ಜಾವಾದ ಇತಿಹಾಸ— ಜನಜೀವನ

(ಭಾಗ—೧)

ಗ್ರೇಸಿಕ್ ಸುರಬಯದ ಸಮೀಪದಲ್ಲಿ ಬ್ರಾಂಟಸ್ ನದೀ ತೀರದಲ್ಲಿರುವ ಒಂದು ಸುಂದರ ನಗರ; ಒಂದು ಕಾಲದಲ್ಲಿ ಪೂರ್ವ ಜಾವಾದಲ್ಲಿ ಪ್ರಧಾನವೂ ಪ್ರವರ್ಧಮಾನವೂ ಆಗಿದ್ದ ಪಟ್ಟಣ. ಇಂಡೋನೇಸ್ಯದ ದ್ವೀಪಕಲ್ಪದ ಇತರ ದ್ವೀಪಗಳು ಮತ್ತು ಹೊರ ದೇಶ ಇವುಗಳೊಡನೆ ಅದರ ಆಗಲೆನ ವ್ಯಾಪಾರ ಭಾರಿ. ಗಂಧಪರಕು ದೃಷ್ಟಿಯಿಂದ ಎಂಡೋನೆಂಟಿನವರು ಯಾತ್ರಾ ಕಾಲದಲ್ಲಿ ಯಾತ್ರಾರ್ಥಿಗಳನ್ನು ನದಿ ದಾಟಿಸುವ ಏರ್ಪಾಡಿನ ಜವಾಬು ದಾರಿ ವಹಿಸಬೇಕೆಂದು ಸಮಿತಿ ತನ್ನ ವರದಿಯಲ್ಲಿ ಮಾಡಿರುವ ಶಿಫಾರಸು ಆಂಧ್ರ ಸರಕಾರದ ಅಂಗೀಕಾರಕ್ಕೆ ಅರ್ಹವಾಗಿದೆ.

——

ಗಂಧದ ಮರ ಮೆಣಸಿನ ಕಾಳು ಅರಳೆ ನೂಲು ಮತ್ತು ಕೋಣದ ಚರ್ಮ ಇವನ್ನು ಗ್ರೇಸಿಕ್ ನಾನಾ ದೇಶಗಳಿಂದ ತರಿಸಿಕೊಳ್ಳುತ್ತಿತ್ತು. ಅದು ಮಜಾಪಹಿತ್ ಸಾಮ್ರಾಜ್ಯ ಬಲವಾಗಿದ್ದ ಹದಿನಾಲ್ಕನೇ ಶತಮಾನದ ಆದಿಯಲ್ಲಿ.

ಮಜಾಪಹಿತ್ ಸಾಮ್ರಾಜ್ಯದ ಅಧಿಕಾರ ಆ ಸಂಪೂರ್ಣ ದ್ವೀಪಕಲ್ಪದಲ್ಲಿ ವ್ಯಾಪಿಸಿ ಅದರ ರಾಜಕೀಯ ಪ್ರಭಾವ ಮಹತ್ತರವಾಗಿತ್ತು. ಹಿಂದೂ ಮತ್ತು ಬೌದ್ಧ ಏಕೀಕೃತ ಮತವೇ ಅಲ್ಲಿ ವಾಸ್ತವವಾಗಿ ಆಚರಣೆಯಲ್ಲಿದ್ದರೂ ರಾಜಸ್ಥಾನದ ವರ್ತುಲದಲ್ಲಿದ್ದವರು ಹಿಂದೂ ಧರ್ಮವನ್ನೇ ಅಂಗೀಕರಿಸಿದ್ದರು. ಹಳ್ಳಿಯ ಜನರು ಗ್ರಾಮ ಜೀವನದ ತಮ್ಮ ಆರ್ಥಿಕ ವಿಷಯಗಳಲ್ಲಿ ರಾಜಾಸ್ಥಾನದ ಧಾರ್ಮಿಕ ಆದೇಶಗಳ ಪರಿಣಾಮವೇನೂ ಆಗದ್ದರಿಂದ ಅವರು ಸ್ವೈರಣೆಯಿಂದ ಆ ಆದೇಶಗಳನ್ನೇ ಅನುಸರಿಸುತ್ತಿದ್ದರು.

ಗ್ರೇಸಿಕ್ ನೈಸರ್ಗಿಕ ಸೊಬಗಿನ ನಗರ. ಮೇಲಾಗಿ ಒಬ್ಬನು ಅಲ್ಲಿ ಸುಲಭವಾಗಿ ಜೀವನ ಮಾಡುವುದೂ ಸಾಧ್ಯ. ಹಾಗೆ ಚೀನಾ ಭಾರತ ಅರೇಬಿಯಗಳಿಂದ ಬಂದ ವ್ಯಾಪಾರಿಗಳು ಗ್ರೇಸಿಕ್‌ನಲ್ಲೇ ನೆಲೆ ನಿಲ್ಲುವಂತಾಯಿತು. ಈಗ ಅದು ಪ್ರಮುಖ ಬಂದರವಲ್ಲವಾದರೂ ಜಾತಿ ಜನಾಂಗದ ಕಟ್ಟುನಿಟ್ಟಿಲ್ಲದ ಒಂದು ಪಟ್ಟಣ. ಭಾರತದಿಂದ ಅತ್ತ ಬಂದ ವ್ಯಾಪಾರಿಗಳಲ್ಲಿ ಗುಜರಾತಿನ ಮಾಲಿಕ್ ಇಬ್ರಾಹಿಂ ಎಂಬಾತ ನಿದ್ದ; ಆತ ಧರ್ಮನಿಷ್ಠ ಮುಸ್ಲಿಂ. ಇಸ್ಲಾಂ ವೇದಾಂತವನ್ನಲ್ಲಿ ಪ್ರಚಾರಕ್ಕೆ ತಂದವನಾತನೇ.

ವ್ಯಾಪಾರಿಗಳಲ್ಲಿ ಹಲವರೂ ಹಿಂದೂ ಧರ್ಮದ ಬಿಗಿಯಾದ ಸಾಮಾಜಿಕ ಕಟ್ಟಳೆಗಳಿಂದ ಬದ್ಧರಾದವರು. ಆ ಮತಾಂತರ ಹೊಂದಲು ತವಕ ಪಡದ್ದರು. ಅವರು ವೈಶ್ಯರು. ಪುರೋಹಿತ ಅಥವ ಕುಲೀನ ವರ್ಗದವರಿಗಿಂತ ಕೆಳಗಿನವರು. ಅವರ ಸಂಪತ್ತೂ ಅವರ ಸಮಾಜ ಸ್ಥಾನವನ್ನು ಬದಲಾಯಿಸಲಾರದೆಂದು ಅದರ ಅರ್ಥ.

(ಮುಂದುವರಿಯುವುದು)



- ಗುಂಡನ ಗಜೇಟು -

'ಹಾಗೇ ಹೌದು' ಅಂತ ಮೊದಲು ಅಂದು ಮತ್ತೆ ಅದಕ್ಕೆ ವಿರೋಧವಾಗಿ 'ಹಾಗಲ್ಲ' ಅಂತನ್ನುವ ಈ ಅಭ್ಯಾಸ ನಮ್ಮ ಜನರಲ್ಲಿ ಹಲವರಿಗೂ ಚೆನ್ನಾಗಿ ಅಗಿ ಹೋಗಿದೆ. ಹೆಣ್ಣು ಗಂಡಿನ ಪ್ರಸಾವದಲ್ಲಿ ಇದು ಸಾಮಾನ್ಯ. 'ನಿಮ್ಮ ಹುಡು ನೀನೇ? ಮಾಡಿತೊಳ್ಕೋಣ' ಅಂತ ಮೊದಲು ಆಸೆ ಹುಟ್ಟಿಸಿದವರೇ ಸಮಯ ಬಂದಾಗ ತಾವು ಹಾಗಾಡಿದ್ದೇ ಇಲ್ಲ ಅಂತ ಬಾಯಿ ಹಾರಿಸಿ ಬಿಡತಾರೆ. ಅದೇ ನಾಲಿಗೆ ಯಿಂದ. ಪಕ್ಷ ಮಾಸದಲ್ಲಿ ಇದರ ಪ್ರಭಾವ ೋರು. ಅಮಾವಾಸ್ಯೆಯಂದು ನಿಮ್ಮ ೇ ಬರುತೇನೆಂತ ಭರವಸೆ ಹೇಳಿದ ೀಹಿತ ಆವತ್ತು ಅಲ್ಲಿಗೆ ಚಕ್ಕರ್ ೆ ಆ ಮೇಲೆ ಅವರನ್ನು ಎಂದೋ ಂದು ಕಡೆ ಕಂಡು 'ಹಾಗೆ ಮಾಡ ಬಹುದೇ?' ಅಂತ ವಿಚಾರಿಸಿಕೊಂಡಾಗ 'ನಿಮಗೇನು ಬುದ್ಧಿ ಕೆಟ್ಟು ಹೋಗಿದೆ ೇನ್ರಿ? ಆವತ್ತು ಯಾವ ಪುರೋಹಿತ ೋ ನೀವು ಹೇಳಿಕೊಂಡು ಆತ ಬಾರದೆ ರೆ ಮೂರು ನನ್ನ ತಲೆಗೇ?' ಅಂತ ಣ್ಣು ಕೆಂಪಗೆ ಮಾಡಿದರೆ ಚುಟುಕಿ ೀರಿತಲ್ಲವೇ?

ಮೊದಲು (ಜನಗಳ ತೃಪ್ತಿಗಾಗಿ) 'ಹಾಗೇ ಹೌದು' ಅನ್ನುವ ಅಭಿಪ್ರಾಯ ಸೂಚಿಸಿ ಮತ್ತೆ 'ಹಾಗಲ್ಲ' ಅನ್ನುವ ಈ ಚಟ ನಮ್ಮ ಕೆಲವು ಮಂತ್ರಿಗಳಿಗೂ ಇಲ್ಲದೆ ಹೋಗಿಲ್ಲ. ಸಂಚಾರದ ಆಯಾಸ ಒಂದಾದರೆ ಒಂದೇ ದಿನ ನೂರೆಂಟು ಕಾರ್ಯಕ್ರಮಗಳ ಅರಿಕೆಯೋಲೆಗಳ ಜಂಜಾಟ ಒಂದು. ಇವುಗಳ ಗಡಿಬಿಡಿಯಲ್ಲಿ ಹಿಂದೆ ಹೇಳಿದ್ದೆಲ್ಲ ಮರವೆಯಾದಂತೆ ಈವೊತ್ತು ಅದಕ್ಕೆ ವ್ಯತಿರಿಕ್ತವಾಗಿ ಅವರಾಡಿದರೂ ಅವರ ಮಂತ್ರಿಸ್ಥಾನವೇನೂ ತಿಲಾಂಶವೂ ಅಲ್ಲಾಡುವ ಹಾಗಿಲ್ಲ ಅನ್ನಿ. ಆದರೆ ಇವರಿಗಿಂತ ಈ ಗುಣ ಸೇಕಡಾ ೫೦॥ ಪಾಲು ಹೆಚ್ಚೆಂದು ಕಂಡುಬರುವುದು ನಮ್ಮ ಮುಂದಾಳು ಮುಖಂಡ ಅಂತಾ —ಅಂಥವರ ರಾಜಕೀಯ ಮುಂಡಾ ಳ ಆಡಿಯಲ್ಲಿ. ಮೊದಲು 'ಹಾಗೇ ನ್ನಬೇಕು; ಮತ್ತೆ 'ಹಾಗಲ್ಲ' ಎನ್ನ ಹೀಗೆ ತಿಥಿಗು ಮುರುಗಾಗಿ ಂದಂತೆ ತಿದ್ದಿಕೊಂಡು ಹೇ ಮಹಾ ವಿದ್ಯೆಯಲ್ಲಿ ಯಾರು ರೋಮಣಿಯಾಗಬಲ್ಲನೋ ಅವ ಜಕೀಯ ಮುಂಡಾಸುವಾಲ

ನೆಂದು ಅಥವ ಆಧುನಿಕ ರಾಜಕಾರಣಿ ಎಂದು ಗುಂಡ ಸಾರುತ್ತಾನೆ. ಇದು ತಪ್ಪೆಂದು ಯಾರಾದರೂ ಅವನೊಡನೆ ಜಗಳಕ್ಕೆ ಹೊರಟದ್ದೇ ಆದರೆ ಅವರಿಗೆ ತಪರಾಕಿನ ಮಹಾ ಪೂಜೆ ತಪ್ಪದೆಂಬುದಂ ತಿರಲಿ; ಪಂಥ ಕಟ್ಟಿದರೆ ವಿಶ್ವನ್ಯಾಯವೇ ಅಲ್ಲ; ಭದ್ರತಾ ಸಮಿತಿ ವರೆಗೂ ಕಾಲ್ನಡೆ ಯಲ್ಲೇ ಹೋಗಿ ಅಲ್ಲಿ ಈ ಮುಂಡಾಸು ವಾಲಾ ಅಥವ ಟೋಪೀವಾಲ ಅಥವ ಖಾಸೆವಾಲಾ ಯಾನೆ ಗಡ್ಡಾವಾಲ ಇವರ ಪರವಾಗಿಯೂ ವಿರೋಧವಾಗಿಯೂ ತಿಂ ಗಳುಗಟ್ಲೆ ವಾದಿಸಲೂ ಗುಂಡ ತಯಾರಿ ದ್ದಾನೆ ಅಂದುಕೊಳ್ಳಿ.

ಆದರೆ ನಮ್ಮ ರಾಜಕಾರಣಿಗಳ ತಲೆ ಬಾಯಿಗಳ ತುಲಾಭಾರಕ್ಕಾಗಿ ಗುಂಡ ಅಷ್ಟೆಲ್ಲ ಶ್ರಮ ವಹಿಸಬೇಕಾದದ್ದಾದರೂ ಯಾಕೆ? ನೀವೇ ತೂಗಿ ನೋಡಿದರೆ ಸಾಲದೇ? ಈವೊತ್ತು ಒಬ್ಬ ಮಿಡಿವಂತ ರಾಜಕಾರಣಿ ಒಂದು ಕಡೆ 'ಹಾಗೇ ಹೌದು' ಎಂದು ಭಾಷಣ ಮಾಡುತ್ತಾನೆ. ಅದು ಪತ್ರಿಕೆಗಳಲ್ಲಿ ಬರುತ್ತವೆ. ಮರು ದಿನ ಆದು 'ಹಾಗಲ್ಲ' ಹೀಗೆ ಎಂಬ ಈ ರಾಜಕಾರಣಿಗಳ ಮಾರುದ್ದದ ತಿದ್ದುಪಡಿ ಗಳು ವಿವರಣೆ ವ್ಯಾಖ್ಯಾನ ರೂಪದಲ್ಲಿ ಆವೇ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತವೆ. ನೀವೆಲ್ಲ "ರೈಲ್ವೆ ವಿಮಾನ ಮೋಟಾರುಗಳ ಅವಘಡ"ಗಳೆನ್ನುವಂತೆ ಗುಂಡ ಇವನ್ನು "ಭಾಷಣಗಳ ಅವಘಡ"ಗಳೆನ್ನುತ್ತಾನೆ. ಇಂಥ 'ಅವಘಡ'ಗಳು ಇಡಿಯ ನಮ್ಮ ದೇಶದಲ್ಲಿ ವರ್ಷಕ್ಕೆ ಎಷ್ಟಾಗುತ್ತವೆ? ಅವು ಗಳಿಂದ ಎಷ್ಟು ಪತ್ರಿಕೆಗಳ ಪುಟ ತುಂಬು ತ್ತವೆ? ಇದರ ಪರಿಶೀಲನೆಗಾಗಿ ವರ್ಷದ ದಿನಗಳಂತೆ ೩೬೫ ಮಂದಿಯ ಒಂದು "ಹೆಡ್ಡ—ವೈಜರ" ಸಮಿತಿ ರಚನೆಯಾಗ ಬೇಕು. ದಿನಕ್ಕೊಬ್ಬರು ಅವರಲ್ಲಿ ಸಮಿತಿ ಅಧ್ಯಕ್ಷರಾಗಿರಬೇಕು. ಸಮಿತಿಯಲ್ಲಿ ಎಲ್ಲರೂ ಹೆಂಗಸರೇ. ಸಂದಿ ಮೂಲೆ ಗ್ರಾಮಗಳಲ್ಲಿನ ಹೊಲಗಳಲ್ಲಿ ಗೇಯುವ ವರು; ಓದುಬರಹವೇನೂ ಇಲ್ಲದೆ ಹಣೇ ಬರಹವೇ ಮುಖ್ಯ ಎನ್ನುವವರು. 'ಪತ್ರಿಕೆ' ಹೆಸರೇ ಕೇಳದವರು. ಅಂಥವರದೇ ಒಂದು ಸಮಿತಿ ಆದರೆ ಅವರ ಕಡೆಯಿಂದ ಒಂದು ವರದಿಯೂ ತಯಾರಾಗಿ ಬಂದರೆ ಮೊದಲು 'ಹಾಗೇ ಹೌದು' ಎಂದಾಗಿ ಮತ್ತೆ 'ಹಾಗಲ್ಲ'ವೆಂದಾದ 'ಮಂಗಳೂ ರಿನ ಸರ್ಪ ಋತು' ಬಂದರಕ್ಕೇ ಪೃಥ್ವನು ಸ್ಥಾನವೂ ಸೇಕಡಕ್ಕೆ ಸೇಕಡಾ 'ಫುಲ್ ಮಾರ್ಕೂ' ಸಲ್ಲಬೇಡವೇ

ಗುಂಡ 'ಪತ್ರಿಕೆ' ಎಂದನೇ? ಹೌದು. ಪತ್ರಿಕೆಗಳಿಗೆ ತಾವೇ ಎಲ್ಲದಕ್ಕೂ ಮೊದಲು ಬಿಸಿ ಬಿಸಿ ಸುದ್ದಿ ಪ್ರಕಟಿಸಿದ ಹೆಸರು ಕೇ ಳಬೇಕು ಎಂಬಾಸೆ. ಅಂತೆ ಆ ಹೆಸರಿ ಗಾಗಿ ಪೇಚಾಡುತ್ತಿದ್ದ ಯಾವುದೋ ಒಂದು ಪತ್ರಿಕೆ ಒಂದು ದಿನ ಒಂದು ಸನಾಚಾರ ಪ್ರಕಟಿಸಿತ್ತು ಹೀಗೆ:— "ಬೊಂಬಯಿಯ ಭಾರೀ ಒಂದು ರಂಗಿನ ಕಾಖರ್ಖಾನೆಗೆ ಬೆಂಕಿ ಹತ್ತಿದ ವಾರ್ತೆ ಯನ್ನು ಇಡಿಯ ರಾಷ್ಟ್ರದಲ್ಲೇ ಪ್ರಥಮತಃ ಪ್ರಕಟಿಸಿದವರು ನಾವೇ." ಆನಂತರ ಆದರ ಮತ್ತೊಂದು ವಾರ್ತೆ ಹೀಗೆ:— "ಬೆಂಕಿ ಹತ್ತಿದ ಆ ವಾರ್ತೆ ತೀರ ನಿರಾ ಧಾರವೆಂದು ನಮ್ಮ ವಾಚಕರಿಗೆ ಪ್ರಥ ಮತಃ ತಿಳಿಯಪಡಿಸಿದವರೂ ನಾವೇ" ಈ ರೀತಿಯಲ್ಲಿ 'ಹಾಗೇ ಹೌದು;' 'ಹಾಗಲ್ಲ' ಎಂಬೆರಡರ ಎಣ್ಣೆ ಸೀಗೆ ಸಂಸಾರವೂ— ಭಿನ್ನ ಧ್ಯೇಯಗಳ ಎರಡು ರಾಜಕೀಯ ಪಾರ್ಟಿ ಮಿಶ್ರ ಸರಕ್ಕಾರದಂತೆ—ಸಾಗಲು ಸಾಧ್ಯ ಎನ್ನುವುದಕ್ಕೆ ಇದೊಂದು ದೃಷ್ಟಾಂತ.

ಇಂಥ ಸ್ಯಾಂಪಲ್ ಇನ್ನೊಂದಾದರೂ ನಿಮ್ಮ ಮುಂದಿಡದೆ ಗುಂಡನಿಗೆ ತೂಕಡಿಕೆ ಆಕಳಿಕೆ ಬಿಕ್ಕಳಿಕೆ ಬಂದರೂ ನಿದ್ದೆ ಬಾರದು, ನಮ್ಮ ಸಚಿವರಲ್ಲಿ ಹಲವ ರಿಗೂ ಸಂಸಾರವುಂಟು. ಗಂಡು ಮಕ್ಕಳೂ ಇದ್ದಾರು. ಈ ಮಂತ್ರಿಗಳಿಗೆ ಸಲ್ಲುವ ಮರ್ಯಾದೆಯಲ್ಲಿನೆ ದಾಮಾಶಾಯದಂತೆ ಅವರ ಪುತ್ರರಿಗೂ ಸಲ್ಲುತ್ತದೆ ಅಂತ ಗುಂಡ ಕೇಳಿ ಬಲ್ಲ. ಅಂತಲೇ ಮಂತ್ರಿ ಗಳ ಮಗನಂತೆ ನಟಿಸಿದ ಒಂದು ಮೊಕ ದ್ದಮೆಯ ಆರೋಪಿಯು ತನಿಖಿ ಈಗ ಡಿಲ್ಲಿ ನ್ಯಾಯಾಧೀಶರಲ್ಲಿ ಆಗಲಿದೆಯಂತೆ. ಹಿಂದೆ ಮಂತ್ರಿ ಪುತ್ರ ಹೌದೆಂದವನು ಈಗ ಕೋರ್ಟಿನಲ್ಲಿ ಹಾಗಲ್ಲವೆಂದು ಒಪ್ಪಿ ದರೆ ಆಥವ ರುಜುವಾತಾದರೆ ಅವನಿಗೆ ದಂಡನೆ ಸಿದ್ದ. ಹಾಗೆ ಕಾನೂನು. ಆದರೆ ಮಂತ್ರಿ ಕುಮಾರ ತನ್ನ ತಂದೆ ಸಚಿವರಿಂದ ಇತರ ಸಚಿವರಿಂದ ಇನ್ನಾ ೈರೋ ಉಚ್ಚಾಧಿಕಾರಿಗಳಿಂದ ಅಪ್ಪಣೆ ಪಡೆದೇ ಯಾವುದೋ ತನ್ನ ವ್ಯವಹಾರ ಪಹಿವಾ ಟಕ್ಕೆ ಹೊರಟನೆಂಬ ಸಂದರ್ಭದಲ್ಲಿ, ಆತನ ಪಾಪಕ್ಕೆ ಯಾವ ಮಂತ್ರಿಗಳಾಗಲಿ ಯಾವ ಅಧಿಕಾರಿಗಳಾಗಲಿ ಯಾರೂ ದಂಡನೆಗೆ ಪಾತ್ರರಲ್ಲ ಅಂತ ಕಾಂಗ್ರೆಸ್ ಹ್ಯಾ ಕಮಾಂಡಿನ ವಿಧಿಯೊಂದು ಇದೆ ಎಂಬುದೇನು ನಿಜವೋ ಸುಳ್ಳೋ? ಅವರಿ ಗದರ ಲೇಪವೇನೂ ಕಾಂಗ್ರೆಸ್ ನೀತಿ ಯಂತೆ ಇಲ್ಲವೆಂದಾದಲ್ಲಿ, ಆ ಪಾಪ ಮಾಡಿದ ಮಗನಿಗಾದರೂ ಪ್ರಾಯಶ್ಚಿತ್ತ ಇದೆಯೋ ಇಲ್ಲವೋ? ಈ ವಿಚಾರವನ್ನು ಗುಂಡ ಪಾರ್ಲಿಮೆಂಟ್ ಮೆಂಬರನಾಗುವ ಕಾಲಕ್ಕೆ ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಕೇಳಿ ಉತ್ತರ ಪಡೆಯದೆ ಎಂದಿಗೂ ಇರುವವ ನಲ್ಲ ಎಂದು ಎಲ್ಲರಿಗೂ ತಿಳಿದಿರಲಿ!

——

ಕಾಂಗ್ರೆಸೂ ಗಣತಂತ್ರ ಪರಿಷತ್ತೂ

"ಕಾಂಗ್ರೆಸ್ ಪಾರ್ಟಿಯೊಡನೆ ಗಣತಂತ್ರ ಪರಿಷತ್ತಿನವರು ಸಮಾವೇಶಗೊಳ್ಳುವ ರೆಂದು ಒರಿಸದ ಕಾಂಗ್ರೆಸ್ ಮಂದಿ ಎಷ್ಟು ಮಟ್ಟಿಗಾದರೂ ನಂಬಿಕೊಂಡಿದ್ದಿ ರಲಿ. ಅದು ಭ್ರಮಾತ್ಮಕ ಕಲ್ಪನೆ! ಈ ವಿಚಾರ ಆ ಪರಿಷತ್ತಿನ ವಾರ್ಷಿಕ ಮಹಾ ಧಿವೇಶನದಲ್ಲಿ ಆ ಪಾರ್ಟಿ ತಳೆದ ಧೃಢ ಸಂಕಲ್ಪದ ನಿಲುಗಡೆಯಿಂದ ವ್ಯಕ್ತ ಪಟ್ಟಿದೆ. ಪಾರ್ಟಿ ಅಸ್ತವಾಗಬೇಕೆಂಬ

ಶ್ರೀ ಲಕ್ಷ್ಮೀ ಟ್ರಾನ್ಸ್‌ಪೋರ್ಟ್ ಸರ್ವೀಸ್, ಮಂಗಳೂರು.

ಜಿಲ್ಲೆಯಲ್ಲಿ ಗೂಡ್ಸ್ ಮತ್ತು ಪಾರ್ಸೆಲು ಗಳನ್ನೊಯ್ಯುವ ಸರ್ವೀಸು.

ಟೆಲಿಫೋನ್ ನಂಬ್ರ ಕದ್ರಿ 165. ಬಂದರ ಆಫೀಸು ಟೆಲಿಫೋನ್ ನಂಬ್ರ: 487
ಕುಂದಾಪುರ: 28.

ಜಿಲ್ಲೆಯಲ್ಲಿ ಪದಾರ್ಥಗಳನ್ನು ಸಾಗಿಸಲು, ಸಾರ್ವಜನಿಕರಿಗೆ ತಕ್ಕ ಸೌಕರ್ಯ ಗಳನ್ನು ಒದಗಿಸಿ ಕೊಡುವುದೇ ಈ ಸರ್ವೀಸಿನ ಮುಖ್ಯ ಉದ್ದೇಶ.

ಸರ್ವೀಸ್ ಲ್ಯಾನುಗಳು

ಸೋಮವಾರ	ಕೊಲ್ಲಮೊಗ್ರು, ಸಂಪಾಜೆ, ಮುಂಡಾಜೆ, ಸುಬ್ರಮಣ್ಯ, ಮಂಗಲ ಪಾಡಿ
ಮಂಗಳವಾರ	ಕುಂದಾಪುರ, ಮಂಜೇಶ್ವರ, ಎಲಿಮಲೆ, ಹೊಸಮಠ ಸುಬ್ರಮಣ್ಯ
ಬುಧವಾರ	ಉಡುಪಿ, ಕೊಲ್ಲಮೊಗ್ರು, ಕುಂಟಾರು, ಗಾಡಿಗುಡ್ಡೆ, ಮೂಡೂರು
ಗುರುವಾರ	ಸುಬ್ರಮಣ್ಯ, ಧರ್ಮಸ್ಥಳ, ಪಾಣಾಜೆ, ಕಾಂತಿಲ.
ಶುಕ್ರವಾರ	ಕುಂದಾಪುರ, ಮುಂಡಾಜೆ, ಕಾಸರಗೋಡು, ಮಂಗಲಪಾಡಿ.
ಶನಿವಾರ	ಎಲಿಮಲೆ, ಮಂಜೇಶ್ವರ, ಕುಂಟಾರು, ಗಾಡಿಗುಡ್ಡೆ, ಹತ್ಯಡ್ಕ.

ಪೋಸ್ಟಲ್ ಇಲಾಖೆಗೆ ಬಾಧಕವಿಲ್ಲದ ಯಾವತ್ತೂ ಪಾರ್ಸೆಲುಗಳನ್ನು ಸ್ವೀಕರಿಸಲಾಗುತ್ತದೆ. ಸಾರ್ವಜನಿಕರ ಕೇಳಿಕೆ ಇದ್ದರೆ ಇತರ ಕಡೆಗಳಿಗೂ ವಿಸ್ತರಿಸುವುದು.

ಗೂಡ್ಸ್ ಬುಕ್ಕಿಂಗ್ ಆಫೀಸು, ಬಂದರು, ಮಂಗಳೂರು.

ಮಂಗಳೂರು, 15—6—58

ವೆಂಕಟಗಿರಿ ಮಹಾತ್ಮೆ

ವೆಂಕಟಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ನಿಃಖಚಿತವಾಗು ವಂತೆ ಸ್ಲೇಜ್‌ಕಾಗದದಲ್ಲಿ ೧೪ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿದೆ. ೫೯ ಪದ್ಯಗಳಿರುವ ೧೪ ಅಧ್ಯಾಯಗಳು ದಪ್ಪವಾದ ಕಾಗದ. ಮುದ್ದಾದ ಮುದ್ರಣ.

ಬೆಲೆ ರೂಪ್ಯಾ ೨—೦—೦ ಟಪಾಲು ಖರ್ಚು ಬೇರೆ

ಮಂಗಳೂರು ಪ್ರೆಸ್, ರಥಬೀದಿ, ಮಂಗಳೂರು.

ಈ ಸೂಚನೆ ಅರ್ಥಶೂನ್ಯವೆಂದು ಪಾರ್ಟಿ ಅಧ್ಯಕ್ಷರು ವಿಶದೀಕರಿಸುತ್ತ,—ಅದು ತನ್ನ ವರ್ಚಸ್ಸನ್ನು ವಿಸ್ತರಿಸಿಕೊಳ್ಳುವ ಮಟ್ಟಿಗೆ ಮಾತ್ರ ಕಾಂಗ್ರೆಸಿನೊಡನೆ ರಾಜಕೀಯ ಅನುಕೂಲತೆಯ ಸಂಪರ್ಕವಿರಿಸಿಕೊಂಡಿದೆ ಎಂದರು.

೧೯೬೨ರ ಮಹಾ ಚುನಾವಣೆ ಬಳಿಕ, ಪರಿಷತ್ ಎಸೆಂಬ್ಲಿ ಪಾರ್ಟಿ ಬೆಂಬಲವಿಲ್ಲದೆ ಒರಿಸಾ ಕಾಂಗ್ರೆಸ್ ಅಧಿಕಾರದಲ್ಲಿರುವ ಸಂಭವ ತೀರಾ ಅಡಿಮೆ ಎಂಬುದು ಆ ಕಾಂಗ್ರೆಸ್ ಮಂದಿಗೆ ಗೊತ್ತೇ ಇದೆ. ಆನ್ನುವಾಗ ಪರಿಷತ್ತು ಆ ಪಾರ್ಟಿ ಕಾರ್ಯಕ್ರಮವನ್ನು ತಾನೇ ರೂಪಿಸಿ ಕೊಂಡು ಅಧಿಕಾರವನ್ನು ತಾನೇ ಉಳಿಸಿ ಕೊಳ್ಳಲು ಯತ್ನಿಸಿದರೂ ಆಶ್ಚರ್ಯವಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಪರಿಷತ್ ಪಾರ್ಟಿ ಹೇಳಿ ಬರೆಸುವ ಶರ್ತಗಳ ಮೇಲೆ ಮಾತ್ರ ಅಲ್ಲಿ ಮುಂದೆ ಕಾಂಗ್ರೆಸ್ ಪರಿಷತ್ತಿನೊಳಗಿನ ಬಾಂಧವ್ಯ ಸಾಧ್ಯವೆನ್ನುವ ಹಾಗಿದೆ.

ಒರಿಸದಲ್ಲಿ ಮುಂದಿನ ಮಹಾ ಚುನಾವಣೆಯ ಜಯಾಪಜಯದ ಮಾತು ಹೇಗೇ ಇರಲಿ. ಗಣತಂತ್ರ ಪರಿಷತ್ತಿನವರು ಈಗಿನಿಂದಲೇ ಆ ಚುನಾವಣೆಗಾಗಿ ಸಿದ್ಧತೆ ಮಾಡಬೇಕೆಂದು ಪರಿಷತ್ತಿನ ಅಧ್ಯಕ್ಷರು ತಮ್ಮವರಿಗೆ ಉಪದೇಶ ಕೊಟ್ಟಿರುವುದನ್ನು ನೋಡಿದರೆ, ಅಲ್ಲಿ ಇದುವರೆಗೆ ಮಿಶ್ರ ಸರಕಾರದಿಂದ ನೆತ್ತಗೆ ಸಾಗಿದ ಕಾರ್ಯಭಾರಗಳ ಮೇಲೆ ಆ ಉಪದೇಶದ ಪರಿಣಾಮವಾದೀತೇನೋ ಎಂಬ ಸಂದೇಹ ಬಂದಿದೆ. ಮತ್ತೆ ಈ ಮಿಶ್ರ ಸರಕಾರಕ್ಕೆ ವಿರೋಧಿಗಳಾದ ಅಲ್ಲಿನ ಅತೃಪ್ತ ಕಾಂಗ್ರೆಸ್ ಮಂದಿಯ ಕೈಗಳನ್ನೂ ಅದು ಬಲಪಡಿಸಬಹುದೇನೋ ಎಂಬ ಭೀತಿಯೂ ಅಲ್ಲಿ ತಪ್ಪಿಲ್ಲ.

ಈ ಅತೃಪ್ತ ಕಾಂಗ್ರೆಸ್ ಮಂದಿ ಈ ಮಿಶ್ರ ಮಂತ್ರಿಮಂಡಲ ವಿಸರ್ಜಿಸಿ ಮಧ್ಯಕಾಲೀನ ಚುನಾವಣೆ ನಡೆಸುವಂತೆ ಈಗ್ಗೆ ಕೆಲವು ವಾರಗಳ ಹಿಂದೆ ಯತ್ನಿಸಿದ್ದರು. ಈ ಮಿಶ್ರಣದಲ್ಲಿ ಕಾಂಗ್ರೆಸಿಗಿಂತ ಪರಿಷತ್ತಿನವರಿಗೇ ಪ್ರಯೋಜನ ಹೆಚ್ಚೆಂಬ ಅವರ ವಾದದಲ್ಲಿ ಕೆಲ ಮಟ್ಟಿಗೆ ತಥ್ಯಾಂಶವಿಲ್ಲದೆ ಏನೂ ಇಲ್ಲ. ಮುಂದಿನ ಮಹಾ ಚುನಾವಣೆಯಲ್ಲಿ ತಮ್ಮ ಪಾರ್ಟಿಯೇ ಸಂಪೂರ್ಣ ಬಹುಮತ ಪಡೆಯಲು ಶಕ್ತವಾಗಬಲ್ಲುದೆಂದು ಪರಿಷತ್ತಿನ ನಾಯಕತ್ವಕ್ಕೆ ಧೈರ್ಯ ಉಂಟಾಗಿರುವುದೇ ಆ ವಾದ ಬಲದ ಸಂಕೇತವಾಗಿದೆ.

ಆ ಮಿಶ್ರ ಸರಕಾರ ಇದುವರೆಗೆ ಅಲ್ಲಿ ಬಹುಮಟ್ಟಿಗೆ ಸಮರಸಭಾವದಿಂದ ಯಶಸ್ವಿಯಾಗಿ ಕೆಲಸ ಮಾಡಲು ಅಲ್ಲಿನ ಮುಖ್ಯ ಮಂತ್ರಿ ಡಾ. ಹರೇಕೃಷ್ಣ ಮೆಹತಾಬರಿಗೆ ಆದರಲ್ಲಿದ್ದ ವಿಶ್ವಾಸವೇ ಕಾರಣ. ಕಾಂಗ್ರೆಸ್ ಪಾಳ್ಯದಲ್ಲಿನ ಪ್ರಬಲ ವಿರೋಧವಿದ್ದರೂ ಪರಿಷತ್ತು ಕೊನೆಗಾದರೂ ಕಾಂಗ್ರೆಸಿನೊಡನೆ ಸಮಾವೇಶಗೊಳ್ಳದಿರದೆಂಬ ಬಲವತ್ತರವಾದ ಹಾರೈಕೆಯಿಂದ ಡಾ. ಮೆಹತಾಬರು ಆ ಸಮಾವೇಶಕ್ಕಾಗಿ ಶ್ರದ್ಧೆಯಿಂದ ಕೆಲಸ ಮಾಡಿದ್ದರು. ಆ ಹಾರೈಕೆ ಈಗ ವ್ಯರ್ಥವಾದಂತೆ ತೋರುತ್ತದೆ. ಇನ್ನು ಪರಿಷತ್ತಿನ ಅಧ್ಯಕ್ಷರ ಖಚಿತವಾದ ತಮ್ಮ ಪಾರ್ಟಿ ವಿಜಯದ ಧೈರ್ಯೋತ್ಸಾಹದ ಕುರಿತು ಡಾ. ಮೆಹತಾಬರ ಪ್ರತಿಕ್ರಿಯೆ ಏನೋ ನೋಡಬೇಕಾಗಿದೆ.

——

ಎದೆಯೊಡೆಯುವ ದುರಂತ

ಒಂದು ಮಗು ಇಬ್ಬರು ಹೆಂಗಸರು ಕೂಡ ೨೫ ಮಂದಿ ರೈಲ್ವೆ ಪ್ರಯಾಣಿಕರು ಆಗ್ರಾಕ್ಕೆ ಹೊರಟಿದ್ದ ಟ್ರೈನಿನ ಮಾಡಿನ ಮೇಲೆ ಕೂತು ಪ್ರಯಾಣಿಸುತ್ತಿದ್ದವರು ಅವಘಡಕ್ಕೀಡಾಗಿ ಮಡಿದ ಆ ಹೃದಯ ವಿದ್ರಾವಕ ಘಟನೆಗೆ ಮಿಗಿಲಾದುದು ಇನ್ನೊಂದಿರಲಾರದು. ಮಥುರಾದ ಬಳಿಯ ಯಮುನಾ ಸೇತುವೆಯ ಮೇಲಿನ ಉಕ್ಕಿನ ತೊಲೆಗೆ ತಗುಲಿ ಅವರೆಲ್ಲ ಕೆಳಗುರುಳಿ ಈ ಭಯಾನಕ ಸಂಗತಿ ನಡೆದಿದ್ದರೂ ಮಥುರಾ ಜಂಕ್ಶನಿನಲ್ಲಿ ಟ್ರೈನ್ ನಿಂತಾಗ ಮಾತ್ರವೇ ಅದು ಗೊತ್ತಾಯಿತೆಂದರೆ ಮಾಡಿನ ಮೇಲೆ ಇದ್ದ ಪ್ರಯಾಣಿಕರ ಕಡೆಗೆ ರೈಲ್ವೆ ಅಧಿಕಾರಿಗಳು ತೋರಿದ ಅಸಡ್ಡೆಯೇ ಕಾರಣವೆಂದೂ ಈ ದುರಂತದ ಹೊಣೆಗಾರಿಕೆ ಪೂರ್ತಿಯಾಗಿ ಅವರದೇ ಎಂದೂ ಹೇಳಲಾಗದೇ?

ಹೀಗೆ ಮಾಡಿನ ಮೇಲಿನ ಪ್ರಯಾಣ ಆ ಕಡೆ ಅಪರೂಪವೇನಲ್ಲ—ಪ್ರತ್ಯೇಕವಾಗಿ ಜಾತ್ರೆ ಸಮಯದಲ್ಲಿ. ಆಗ ಸರಕಿನ ಬಂಡಿಗಳಲ್ಲಿ ಜಾನುವಾರುಗಳಂತೆ ಮನುಷ್ಯರನ್ನು ತುಂಬಿಸುವುದುಂಟು. ಆ ದುರವಸ್ಥೆಯಿಂದ ತಪ್ಪಲು ಜನರು ಮಾಡಿನ ಮೇಲೆ ಪ್ರಯಾಣಿಸುವುದೇ ಲೇಸೆನ್ನುವರುಂಟು. ಅದರೆ ಈ ಕ್ರಮ ಅಪಾಯಕಾರಿಯೂ ಅಪಮಾನಕಾರವೂ ಆಗಿದೆ ಎಂಬುದು ರೈಲ್ವೇ ಶಾಖಾಧಿಕಾರಿಗಳ ಚಿತ್ತಕ್ಕೆ ಇನ್ನೂ ಬಾರದಿರುವುದು ಹಾಸ್ಯಾಸ್ಪದ. ಈಗೀಗ ರೈಲ್ವೇ ಸೌಕರ್ಯಗಳನ್ನು ಬಹಳ ಮಟ್ಟಿಗೆ ಹೆಚ್ಚಿಸಿದೆ ಎನ್ನಲಾಗಿದೆ. ನಮಗೆ ಜನತಾ ಟ್ರೈನುಗಳಿವೆ; ಮೂರನೆ ತರಗತಿಯಲ್ಲಿ ಸಿದ್ರಿಸುವ ಕೊಠಡಿಗಳಿವೆ; ಇಷ್ಟಾದರೂ ಪ್ರಯಾಣಿಕರಿಗೆ ಸಾಕಷ್ಟು ಸ್ಥಳ ಸೌಕರ್ಯವನ್ನು ರೈಲ್ವೆ ಶಾಖೆ ಒದಗಿಸಲಾರದೆ ಇದೆ ಎಂಬುದರಿಂದ ಇನ್ನೂ ಇಂಥ ದುರಂತಗಳು ಮುಂದೆ ಸಂಭವಿಸದೆನ್ನಲಾಗದು. ಸದ್ಯದ ಪರಿಸ್ಥಿತಿಯಲ್ಲಿ ದೂರ ಸ್ಥಳದ ಪ್ರಯಾಣಿಕರಿಗೆ ಸಾಕಷ್ಟು ಸ್ಥಳ ಒದಗಿಸುವ ಕಾಲ್ಯ ಯಾವಾಗ ಬಂದೀತೆಂದು ಯಾರಾದರೂ ಹೇಳಬಲ್ಲರೇ?

ಜಪಾನ್ ಪ್ರಧಾನರಿಗೆ ಇರಿತ

ಜಪಾನ್ ಪ್ರಧಾನ ಮಿ. ನೊಬುಸ್ಕಿ ಕಿಶಿ ಅವರಿಗೆ ಟೋಕಿಯೋದಲ್ಲಿ ಮಧ್ಯವಯಸ್ಸಿನ ಒಬ್ಬ ಜಪಾನೀಯನು ತಿವಿದನು. ತಿವಿತ ಕಾಲಿನಲ್ಲಿ. ಆರು ಗಾಯಗಳಾಗಿವೆ. ಅವರೀಗ ಆಸ್ಪತ್ರೆಯಲ್ಲಿ. ತಿವಿದವನನ್ನು ಹಿಡಿದಿದ್ದಾರೆ.

——



ಮೋಟರ ವ್ಯವಸಾಯದಲ್ಲಿ ನಮ್ಮ ಜಿಲ್ಲೆಯ ಅಪೂರ್ವ ಪರಿಶ್ರಮ
ಕೆನರಾ ವರ್ಕ್ ಶೊಪಿನ ಸ್ಪ್ರಿಂಗುಗಳ ತಯಾರಿಕೆ
ಹಿಂದುಸ್ಥಾನದಲ್ಲಿರುವ ಮೂರು ಕಾರ್ಖಾನೆಗಳಲ್ಲಿ ಇದು ಒಂದು
ಹಿಂದುಸ್ಥಾನದಲ್ಲಿ ತಯಾರಾಗುವ ಇತರರ ಎಲ್ಲಾ ಸ್ಪ್ರಿಂಗುಗಳಿಗಿಂತಲೂ, ಇದು ಶ್ರೇಷ್ಠತರ.
ಕೆಳಗಿನ ಚಿಹ್ನೆ ನೋಡಿ ಸ್ಪ್ರಿಂಗನ್ನು ಪಡೆಯಿರಿ:
ANNA SPRINGS
ಬಸ್ಸಿಗೆ ಹಾಕಿ ಪರೀಕ್ಷಿಸಿ ಶ್ರೇಷ್ಠವೆನ್ನಿಸಿಯದೆ. ಮೇಶೀನುಗಳಲ್ಲಿ ಪರೀಕ್ಷಿಸಿ ಶ್ರೇಷ್ಠವೆನ್ನಿಸಿಯದೆ. ವಿಲಾಯತಿ ಸ್ಪ್ರಿಂಗುಗಳೊಡನೆ ಕೆಲಸ ಮಾಡಿಸಿ ಸರಿಹೋಲಿಸಿ ಶ್ರೇಷ್ಠವೆನ್ನಿಸಿಯದೆ.
The Canara Workshops Ltd., Mangalore-3

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ ನೀವು ಭಾಗ್ಯವಂತರಾಗಿ — ಬಾಳಬಹುದು. —
ಕೋಪ್ರೊರೇಶನ್ ಬೇಂಕು:
ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ ಸುತ್ತ ಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯ ಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.
ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡದೆನ್ನದೆ ಇಂದೇ ಸಂದರ್ಶಿಸಿರಿ!
ದಿ ಕೆನರಾ ಬೇಂಕಿಂಗ್ ಕೊಪ್ರೊರೇಶನ್ ಲಿಮಿಟೆಡ್
ಸ್ಥಾಪನೆ 1906.] [ಪ್ರಧಾನ ಕಚೇರಿ: ಉಡುಪಿ


ಅಮೃತಾಂಜನ
ರಿಂಗ್‌ವರ್ಮ್ ಆಯಿಂಟ್‌ಮೆಂಟ್
(ಸ್ವಭಾವಶಾಲಿ 'ಡಿತ್ರನಾಲ್' ಇದರಲ್ಲಿದೆ ಆದರೆ ಹಾನಿಕಾರಕವಲ್ಲ)
ಗಜಕರ್ಣ, ಹುಳಕಡ್ಡಿ (ಎಗ್ಜಿಮಾ) ಮತ್ತು ಚರ್ಮದ ಎಲ್ಲಾ ತರದ ಕಜ್ಜಿಗಳನ್ನು ಸಂಪೂರ್ಣವಾಗಿ ಗುಣಪಡಿಸುವುದಕ್ಕೆ ಯಾವಾಗಲೂ ಉಪಯೋಗಿಸಿರಿ.
ಅಮೃತಾಂಜನ ಲಿಮಿಟೆಡ್, ಮದ್ರಾಸ್-4
ಸುಪ್ರಸಿದ್ಧ ಅಮೃತಾಂಜನ
ಜೇವಾ ಬಾಮ್ (ನೋವು ನಿವಾರಿಸುವ ಮುಲಾಮು) ತಯಾರಿಸುವವರು.
AL.57.5.KN

Printed and Published by M. Baburaya Prabhu, B.A., at the Mangalore Press, Car Street, Mangalore. Editor: Hurli Bhima Rao.